

## ಸರ್ವಮೂಲ ಸಂದೇಶ

**ನ ಯತ್ರ ನಿದ್ರಾಮೂರ್ಛಾವಾನಾರ್ಥದೃಜ್ ಮನೋರಥಾಃ**
**ನಾನುವೃತ್ತಿರ್ನ ಪ್ರಳಯಸ್ತದ್ಬ್ರಹ್ಮ ವಿಜಿತಾತ್ಮನಃ**

–ಭಾಗವತತಾತ್ಪರ್ಯನಿರ್ಣಯ–

ಮುಕ್ತನಿಯಾಮಕನಾದ ಶ್ರೀಹರಿಯ ಸನ್ನಿಧಾನದಲ್ಲಿ ಜೀವನಿಗೆ ಸುಷುಪ್ತಿ–ಮೂರ್ಛೆಗಳಿಲ್ಲ. ಜಾಗೃತ್ ಸ್ವಪ್ನಗಳಿಲ್ಲ. ಮನೋನಿಗ್ರಹ ಮಾಡಿಕೊಂಡಿರುವ ಜ್ಞಾನಿಗೆ ತನ್ನ ಸ್ವರೂಪವನ್ನು ಆನಂದಪೂರ್ಣವಾಗಿಸುವ ಶ್ರೀಹರಿಯು ಲಭ್ಯವಾಗುತ್ತಾನೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–೭ ಸಂಚಿಕೆ–೯ ಸರ್ವಧಾರಿ ಸಂ.॥ ಶ್ರಾವಣ–ಭಾದ್ರಪದ ಸೆಪ್ಟಂಬರ್ ೨೦೦೮**

ಸಂಸ್ಥಾಪಕರು:
**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**
ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**E-MAIL**
**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 13 |
| **ಅವಲೋಕನ** | ॥ ಸಗ್ರಿ ರಾಘವೇಂದ್ರಾಚಾರ್ಯ | 16 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಜೀವನಯಜ್ಞ** | ಶ್ರೀ ಸುನಂದಕೀ | 26 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 30 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 32 |
| **ವಿಷ್ಣುಪುರಾಣ** | ಸ್ಫೂರ್ತಿ | 34 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | 36 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

**ವಾರ್ಷಿಕಚಂದಾ :** ರೂ. 90.00

**15 ವರ್ಷಕ್ಕೆ :** ರೂ. 1,250.00

**ಸದಸ್ಯರು :** ರೂ. 2,250.00

**ಪೋಷಕರು :** ರೂ. 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಶಶ್ವತ್ ಪರಾರ್ಥ ಸರ್ವೇಹಾಂ ಪರಾರ್ಥೈಕಾಂತ ಸಂಭವಂ।**
**ಸಾಧುಃ ಶಿಕ್ಷೇತ ಭೂಮೇಶ್ಚ ಅನುಶಿಕ್ಷಂ ವ್ರತಾಂತರಂ॥**

ಅವಧೂತ ಹೆಸರಿಸಿದ ಮೊಟ್ಟಮೊದಲನೆಯ ಗುರು ಪೃಥಿವೀ. ಪೃಥು ಅಂದರೆ ದೊಡ್ಡವಳು ಎಂದೂ ಅರ್ಥ. ಇನ್ನೊಬ್ಬರನ್ನು ದೊಡ್ಡವರನ್ನಾಗಿ ಮಾಡುವವಳೂ ಎಂದೂ ಅರ್ಥ. ಭೂಮಿಯು ಭೂಮಳು. ಹಾಗಾಗಿ ಭೂಮಿಯು ದೊಡ್ಡವಳೂ ಹೌದು. ಭೂಮಿಯಿಂದಾಗಿ ಉಳಿದವರು ದೊಡ್ಡವರಾಗುವುದೂ ಸತ್ಯ. ಅದು ಹೇಗೆ? ಭೂಮಿಗೆ ಬಿದ್ದ ಒಂದು ಚಿಕ್ಕ ಬೀಜ ಅದೆಷ್ಟು ದೊಡ್ಡ ಹೆಮ್ಮರವಾಗಿ ಬೆಳೆಯುತ್ತದೆ. ಚಿಕ್ಕ ಬೀಜವನ್ನು ಬೆಳೆಸಿ ದೊಡ್ಡ ಮರವನ್ನಾಗಿ ಮಾಡಿದ್ದು ಭೂಮಿಯ ಸಾಮರ್ಥ್ಯ. ಮರ ಅಂದರೆ ಪುಗ್ಗ(ಬೆಲೂನ್) ಅಲ್ಲ.  ಪುಗ್ಗ ಅಂದರೆ ಬರೀ ಗಾಳಿ ಆಕಾಶ ಮಾತ್ರ. ತೆಳ್ಳಗಿನ ಚೀಲ ಗಾಳಿ ಹಾಕಿದಾಗ ಬೃಹದಾಕಾರವನ್ನು ತಳೆಯುತ್ತದೆ. ಒಳಗೆಲ್ಲಾ ಟೊಳ್ಳು. ಒಂದು ತೂತು ಮಾಡಿದರೆ ಠುಸ್ ಆಗುತ್ತದೆ. ಎಲ್ಲಾ ಖಾಲಿ. ಮರ, ಬೀಜ ಹಾಗಲ್ಲ. ಪಂಚಭೂತಗಳು ವ್ಯವಸ್ಥಿತವಾಗಿ ತುಂಬಿಕೊಂಡು ಗಟ್ಟಿಮುಟ್ಟಾದ ಪದಾರ್ಥವೇ ಮರ ಅನಿಸಿಕೊಳ್ಳುತ್ತದೆ. ಬರೀ ಗಾಳಿ ತುಂಬಿಕೊಂಡ ವಸ್ತು ಮರ ಅಲ್ಲ. ಮಣ್ಣಿನ ಪಾಲೇ ಜಾಸ್ತಿ. ಭೂಮಿ ಇಲ್ಲದಿದ್ದರೆ ಮಣ್ಣಿಲ್ಲ. ಮೊಳಕೆ-ಮರಗಳಿಲ್ಲ. ಹಣ್ಣು-ಹಂಪಲು ಯಾವುದೂ ಇಲ್ಲ. ಗಿಡ-ಮೂಲಿಕೆಗಳಿಲ್ಲ. ಸೊಪ್ಪು-ತರಕಾರಿಗಳಿಲ್ಲ. ಇಷ್ಟನ್ನು  ಹೊರಗಿಟ್ಟರೆ ನಮ್ಮ ಬದುಕೆ ಬರಡಾದೀತು.

ಮೃತ್ತಿಕಾ ಸ್ನಾನ ಅತ್ಯಂತ ಪ್ರಶಸ್ತ. **"ಮೃತ್ತಿಕೆ ಹರಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಂ"**. ವೇದವೇ ಮೃತ್ತಿಕೆಯ ಪಾಪಪರಿಹಾರಕ ಶಕ್ತಿಯನ್ನು ಸಾರುತ್ತದೆ. ಮೌಢ್ಯ, ಅಂಧಶ್ರದ್ಧೆ ಎಂದು ಇಂತಹ ವೈದಿಕಾಚರಣೆಯನ್ನು ಹೀಯಾಳಿಸುತ್ತಿದ್ದರು. ಅಂತವರೇ ಇಂದು ಶ್ರದ್ಧೆಯಿಂದ ನಿರಂತರವಾಗಿ ಗಂಟಲಿನ ತನಕ ಮಣ್ಣಿನ ಲೇಪನ ಮಾಡಿ ಸೂರ್ಯನಿಗೆ ಮೈಯೊಡ್ಡಿ ಪ್ರಕೃತಿ ಚಿಕಿತ್ಸೆಯನ್ನು ನಡೆಸುವುದು ನಾವು ಕಾಣುತ್ತಿದ್ದೇವೆ. ಏನೇ ಇರಲಿ ನಮ್ಮ ಜೀವನವೆಲ್ಲ ಮಣ್ಣಿನಿಂದಾಗಿ. ವಾಸಿಸುವ ಪ್ರಾಣಿಗಳೆಲ್ಲಾ ಮಣ್ಣಿನ ಮಕ್ಕಳೇ. ಇದಕ್ಕೆ ಪ್ರತಿಯಾಗಿ ಮಣ್ಣು ಅಂದರೆ ಭೂಮಿ ನಮ್ಮಿಂದ ಏನನ್ನೂ ನಿರೀಕ್ಷಿಸುತ್ತಿಲ್ಲ. ಪ್ರತ್ಯುಪಕಾರ ಪ್ರತೀಕ್ಷೆಯಿಲ್ಲದೆ ಭೂಮಿಯು ಮಾಡುತ್ತಿರುವ ಉಪಕಾರ ಅನ್ಯಾದೃಶ. ಪೃಥಿವಿಯ ಪ್ರತಿಯೊಂದು ಚೇಷ್ಟೆಯೂ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಪರರಿಗಾಗಿಯೇ. ಪರರಲ್ಲಿ ನೆಲೆಸಿದ ಪರಮಾತ್ಮನಿಗಾಗಿ. ಇದು ಇಂದು ನಿನ್ನೆಯದಲ್ಲ. ಶಾಶ್ವತವಾದ ಪ್ರಕ್ರಿಯೆ. ಅದಕ್ಕೆ ಅವಧೂತರ ಉದ್ಗಾರ. "ಶಶ್ವತ್‌ಪರ ಅರ್ಥ ಸರ್ವ ಈಹಾಂ" ಎಂದು. ಭೂಮಿಯಿಂದ ಕಲಿತ ಪಾಠ ಏನು? ನಮ್ಮ ಪ್ರತಿಯೊಂದು ಪ್ರವೃತ್ತಿಯೂ ಪರರಿಗಾಗಿಯೇ, ಪರಮಾತ್ಮನ ಪ್ರೀತಿಗಾಗಿಯೇ. ಇದು ಪೃಥಿವೀ ಕಲಿಸಿದ ಪಾಠ.

ನಮ್ಮ ಇಂದಿನ ಬದುಕು ಭೂಮ್ಯಾಧಾರಿತ. ನಮಗೆ ಇರುವ ಜಾಗ ಅಷ್ಟೇ ಅಲ್ಲ ಭೂಮಿಯಿಂದ. ನಮ್ಮಲ್ಲಿರತಕ್ಕ ಪ್ರತಿಯೊಂದು ಸಂಪತ್ತೂ ಭೂಮಿಯಿಂದ ನಾವು ತಿನ್ನುವ ಆಹಾರದ ಮೂಲಗಳಿಗೆಲ್ಲಾ ಮೂಲ ಪೃಥಿವೀಯೇ. ಭತ್ತ, ಜೋಳ, ರಾಗಿ, ಗೋಧಿ, ಏನೇ ಇರಲಿ, ಎಲ್ಲದರ "ಉಗ್ರಾಣ" ಪೃಥಿವೀ. ನಾವು ಸಾವಿರ ಬೀಜಬಿತ್ತಿದರೆ ಸಾವಿರ-ಸಾವಿರವಾಗಿ ಭೂಮಿಯು ವಾಸಸ್ಸು ಕೊಡುತ್ತಾಳೆ. ಯಾವ ಬ್ಯಾಂಕ್-ಫೈನಾನ್ಸಗಳೂ ಕೊಡದದ್ದನ್ನು ನೀಡುವ ಪೃಥಿವಿಯ ಇನ್ನೊಂದು ಅನ್ವರ್ಥಕ ನಾಮ ವಸುಧಾ. ತನ್ನ ಗರ್ಭದ ಅಂತರಾಳದಿಂದ ಸಮೃದ್ಧವಾದ ನೀರನ್ನು ನೀಡಿ ನಮ್ಮ ತೃಷೆಯನ್ನು ತಣಿಸುವವಳು. ಹಸಿವೆಯನ್ನು ಪರಿಹರಿಸುವ ಪೃಥಿವಿಯ ಪರಿ. ಚಿನ್ನ-ಬೆಳ್ಳಿ-ವಜ್ರ-ಕಬ್ಬಿಣಗಳ ಗಣಿಯ ವಸುಂಧರೆ ಈ ಪೃಥಿವಿಯೇ. ಗಣಿಯ ಧಣಿ ಈ ತಾಯಿ. ತಾಯಿಯ ಒಡಲನ್ನು ಒಡೆದು, ಬಗೆದು ಕಿತ್ತು ತಿಂದು ತಾನೇ ಧಣಿ ಎಂದು ಬೀಗುವುದು ಮಹಾ ಅಪರಾಧ. ಡೀಸೆಲ್ ಪೆಟ್ರೋಲ್-ಸೀಮೆಎಣ್ಣೆ ಹೀಗೆ ಸಕಲ ತೈಲಗಳ ಮೂಲವೂ ಈ ಪೃಥಿವಿಯೇ. ವಿಮಾನದಲ್ಲಿ ಹಾರಾಡಬೇಕಾದರೆ ಭೂಮಿಯ ಸಹಾಯ ಅತ್ಯಗತ್ಯ, ಭೂಮಿ ಕೊಡುವ ಪ್ರೆಟೋಲ್ ಇಲ್ಲದೆ ವಿಮಾನ ಗಗನದಲ್ಲಿ ಸಂಚರಿಲು ಸಾಧ್ಯವೇ? ರಸ್ತೆಯಲ್ಲಿ ಓಡಾಡುವ ಕಾರ್-ಬಸ್ಸುಗಳು ಓಡಲು ಬೇಕಾದ ಡೀಸಲ್ ನೀಡುವಂತಾಹುದು ಪೃಥಿವೀ ಅನ್ನುವುದನ್ನು ಯಾರಾದರೂ ಮರೆತು ಮೆರೆದಾಡಲು ಸಾಧ್ಯವೇ? ಹೀಗೆ ತೈಲಾಧಾರಿತ ವಾಹನಗಳ, ಸಕಲ ಯಂತ್ರಗಳ ನಿಯಂತ್ರಣ ಮೂಲತಃ ಪೃಥಿವಿಯಿಂದಲೆ. ಏನು ಹೇಳಲಿ! ನಮ್ಮ ಈ ಐಷಾರಾಮದ ಮೂಲ ನಿಧಿ ಈ ಪೃಥಿವಿಯೇ. ಪೃಥಿವಿಯ ಈ ಸರ್ವವಿಧದ ಸಮೃದ್ಧಿ-ಸಂಪತ್ತನ್ನೆಲ್ಲಾ ಪರರಿಗಾಗಿ, ಪರಮಾತ್ಮನಿಗಾಗಿ. ಇದನ್ನೇ ಅವಧೂತರು ಹೇಳಿದ್ದಾರೆ- **"ಪರಾರ್ಥ ಏಕಾಂತ ಸಂಭವಂ"** ಸಂಭವ ಅಂದರೆ ಸಮೃದ್ಧಿ, ಪೃಥಿವೀ ಕಲಿಸಿದ ಪಾಠ ಏನು? ನಮಗೆ ದೊರತ, ನಮ್ಮಲ್ಲಿ ಇರತ್ತಕ್ಕ ಸಕಲ ಸಂಪತ್ತು ಸಮೃದ್ಧಿ-ಸಂಪತ್ತುಗಳು ನಮ್ಮ ಸ್ವಂತಕ್ಕಾಗಿ ಅಲ್ಲ. ಪರರ ಅನುಕೂಲತೆಗಾಗಿಯೇ ಮೀಸಲಿಡಬೇಕು. ಪರರಿಗೆ ಅಂದರೆ ಪರರ ಒಳಗಿದ್ದ ಹರಿವಾಯುಗಳ ಅನುಗ್ರಹಕ್ಕಾಗಿ ಎಂಬುದನ್ನು ನೆನಪಿಸಿಕೊಳ್ಳಲೇಬೇಕು. ಇದು ಪೃಥಿವೀ ಗುರುವಾಗಿ ನಮಗೆ ಕಲಿಸಿದ ಪಾಠ.

(29ನೇ ಪುಟಕ್ಕೆ)

**ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.**

**ವಿದ್ವತ್ ಪ್ರಪಂಚ**



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

## –ಪ್ರಸ್ತಾವನೆ–

ಭಗವಂತನ ಕಡೆಗೆ ಸಾಗಲು ಆವಶ್ಯಕವಾದ ಎಲ್ಲಾ ಸಾಧನೆಗಳನ್ನು ನಿರೂಪಿಸಿದ ಕೃತಿಯೇ ಭಗವದ್ಗೀತೆ. ಸಂಸಾರದ ಬಿಡುಗಡೆ ಪಡೆಯಲು ಜ್ಞಾನ ಒಂದೇ ಸಾಕು. ಭಕ್ತಿ–ಪ್ರಸಾದ–ಸತ್ಕರ್ಮ ಇವುಗಳ ಅವಶ್ಯಕತೆ ಇಲ್ಲ, ಎಂಬುದು ಕೆಲವರ ವಾದ. ಸಂಸಾರವೆಂಬುದು ಭ್ರಮೆ, ಕಾಲ್ಪನಿಕವಾದ ವಸ್ತುವಿನ ನಿವೃತ್ತಿಗೆ ಜ್ಞಾನದ ಹೊರತು ಮತ್ತೇನೂ ಬೇಕಾಗಿಲ್ಲ. ಹಗ್ಗದಲ್ಲಿ ಕಲ್ಪಿಸಿದ ಹಾವಿನ ಭ್ರಮೆಯು ಹಗ್ಗದ ಯಾಥಾರ್ಥಜ್ಞಾನದಿಂದ ನಾಶವಾಗುವುಂತೆ, ಎಚ್ಚೆತ್ತ ಕೂಡಲೆ ಸ್ವಪ್ನವು ಕರಗಿಹೋಗುವಂತೆ ಆತ್ಮಜ್ಞಾನದಿಂದಾಗಿ ಸಂಸಾರವು ಮಾಯವಾಗುತ್ತದೆ. ಇದಕ್ಕೆ ದೇವರ ಭಕ್ತಿ ಅವನ ಅನುಗ್ರಹ, ಅವನನ್ನು ಮೆಚ್ಚಿಸುವ ಸತ್ಕರ್ಮಾಚರಣೆ ಯಾಕಾಗಿ? ಎಂಬುದು ಕೆಲವರ ಸಮರ್ಥನೆ. ಆತ್ಯಂತಿಕಸಿದ್ಧಿಗೆ ಕರ್ಮವೇ ಸಾಕು ಎಂದು ಸಮರ್ಥಿಸುವ ಇನ್ನೊಂದು ವಾದವೂ ಇದೆ. ಈಶ್ವರನನ್ನು ಅಲ್ಲಗೆಳೆಯುವ ಈ ಮೀಮಾಂಸಕರು ಶುಷ್ಕಕರ್ಮಾಚರಣೆಯಿಂದಲೇ ಆತ್ಯಂತಿಕಸುಖ ಸಿಗುವುದು ಎಂದು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಜ್ಞಾನ–ಭಕ್ತಿಗಳಿಗೆ ಸ್ಥಾನವೇ ಇಲ್ಲ. ಪ್ರಸಾದವಂತೂ ದೂರತೋಽಪಾಸ್ತ. ಅವ್ಯಕ್ತನಾದ ಭಗವಂತನು ಖಂಡಿತವಾಗಿಯೂ ಸಾಕ್ಷಾತ್ಕಾರಕ್ಕೆ ಗೋಚರನಾಗಲಾರ. ಅವನ ಧ್ಯಾನವನ್ನು ಮಾತ್ರ ನಾವು ಮಾಡಬಲ್ಲೆವು. ಮೋಕ್ಷಕ್ಕೆ ಸಾಕ್ಷಾತ್ಕಾರದ ಅವಶ್ಯಕತೆ ಇಲ್ಲ. ಶರಣಾಗತಿಯೊಂದೇ ಮೋಕ್ಷಕ್ಕೆ ಸಾಧನ. ಬೇರೆ ಯಾವ ಸಾಧನಗಳು ಬೇಕಾಗಿಲ್ಲ ಎಂಬ ಇನ್ನೊಂದು ವಾದವಿದೆ. ಇಂತಹ ಹಲವಾರು ವಿಭಿನ್ನ ಮಾರ್ಗಗಳಿಂದ ಭ್ರಾಂತನಾಗಬೇಡ. **"ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ"** ಪ್ರಮಾಣಗಳಿಂದ ನಿಶ್ಚಿತವಾದ ಮಾರ್ಗ ಒಂದೇ ಆಗಿದೆ. ಎಲ್ಲಾ ಮಾರ್ಗಗಳು ಸರಿಯೆಂದು ತಿಳಿದು ಸಿಕ್ಕಿದ ದಾರಿಯಲ್ಲಿ ನಡೆದು ಪ್ರಪಾತಕ್ಕೆ ಬೀಳಬೇಡ ಎಂದು ಭಗವದ್ಗೀತೆ ಎಚ್ಚರಿಸಿದೆ. ಸತ್ಕರ್ಮ–ಭಕ್ತಿ–ಜ್ಞಾನ–ಅನುಗ್ರಹ ನಾಲ್ಕು ಕೂಡ ಮೋಕ್ಷಕ್ಕೆ ಅತೀವ ಆವಶ್ಯಕವಾಗಿದೆ.

ಆತನನ್ನು ನಂಬಿ ಕೆಟ್ಟವರಿಲ್ಲ.

ಇದರಲ್ಲಿ ಲವಲೇಶವೂ ಸಂಶಯ ಬೇಡ.

**"ಮತ್ಪ್ರಸಾದಾತ್ ಪರಾಂ ಶಾಂತಿಂ ಅಚಿರೇಣಾಧಿಗಚ್ಛತಿ".**

ಭಗವಂತನ ಅನುಗ್ರಹದಿಂದಲೇ ಪರಮ ಶಾಂತಿಯು ದೊರಕುತ್ತದೆ.

**ಭಕ್ತ್ಯಾತ್ವನನ್ಯಯಾ ಶಕ್ಯ ಅಹಮೇವಂ ವಿಧೋಽಜುನಾ।**
**ಜ್ಞಾತುಂ ದ್ರಷ್ಟಾಂಚ ತತ್ವೇನ ಪವೇಷ್ಟುಂಚ ಪರಂ ತಪ॥**

ಭಗವಂತನ ಜ್ಞಾನ, ಸಾಕ್ಷಾತ್ಕಾರ ಮತ್ತು ಮುಕ್ತಿಯು ಅವನ ಅನನ್ಯ ಭಕ್ತಿಯಿಂದಲೇ ಸಾಧ್ಯ.

**"ಪ್ರಿಯೋಹಿ ಜ್ಞಾನಿನೋಽತ್ಯರ್ಥಂ ಅಹಂ ಸಚಮಮ ಪ್ರಿಯ"**

ಜ್ಞಾನಿಗೆ ದೇವರು ಪರಮಪ್ರಿಯನಾದರೆ ಜ್ಞಾನಿಯಾದ ಭಕ್ತನು ದೇವರಿಗೆ ಅತ್ಯಂತ ಪ್ರೀತಿಪಾತ್ರನು

**"ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ"**

ಎಲ್ಲ ಕರ್ತವ್ಯಗಳನ್ನು ಭಕ್ತಿಯಿಂದ ಮಾಡುತ್ತಾ ಪರಮಾತ್ಮನ ಅನುಗ್ರಹದಿಂದ ಶಾಶ್ವತ ಸ್ಥಾನವನ್ನು ಪಡೆಯುವನು.

ಹೀಗೆ ನಾಲ್ಕೂ ಸಾಧನೆಗಳು ಆವಶ್ಯಕ. ಯಾವುದೇ ಸಾಧನವು ಅನಗತ್ಯವೆಂದು ತೊರೆಯುವುದು ಸರಿಯಲ್ಲ ಎಂದು ಗೀತೆಯು ತೋರಿಸಿಕೊಟ್ಟಿದೆ. ಈ ಜಗತ್ತು ಭ್ರಮೆ, ಅಸತ್ಯ ಎಂದು ಹೇಳುವುದು ಆಸುರೀವೃತ್ತಿ ಎಂದು ಬಲವಾಗಿ ಖಂಡಿಸಿ, ಸಾಕ್ಷಾತ್ಕಾರದ ನಂತರ ಜಗತ್ತು ಮಾಯವಾಗುವುದಿಲ್ಲ, ಆಗಲೂ ಕರ್ತವ್ಯವನ್ನು ಆಚರಿಸಬೇಕು. ಎಂದು ಗೀತೆಯು ಬೋಧಿಸಿದೆ.

ಮುಕ್ತಿಯ ಎಲ್ಲಾ ಸಾಧನೆಗಳ ಸುಂದರವಾದ ಸಮನ್ವಯವನ್ನು ತೋರಿದ ಭಗವದ್ಗೀತೆಯು ಮುಕ್ತಿಯ ರಾಜಮಾರ್ಗವಾಗಿದೆ. ಸರಿಯಾದ ಅರ್ಥವಿವರಣೆ ಇಲ್ಲದೆ ನಾನಾವ್ಯಾಖ್ಯಾನಗಳಿಂದ ಉಂಟಾದ ಸಂಶಯ-ವಿಪರ್ಯಾಸಗಳಿಂದ ರಾಜಪಥದಲ್ಲಿ ಕತ್ತಲೆ ಉಂಟಾದಾಗ ಜಗದ್ಗುರು ಶ್ರೀಮಧ್ವಾಚಾರ್ಯರು ರಚಿಸಿದ ಗೀತಾಭಾಷ್ಯ, ಗೀತಾ ತಾತ್ಪರ್ಯ ಈ ಎರಡು ವ್ಯಾಖ್ಯಾನಗಳು ಸೂರ್ಯಚಂದ್ರರಂತೆ ದಿವ್ಯ ಪ್ರಕಾಶವನ್ನು ಬೀರಿ ಈ ರಾಜಮಾರ್ಗವನ್ನು ಬೆಳಗಿಸಿವೆ. ಶ್ರೀಮಧ್ವಾಚಾರ್ಯರ ವ್ಯಾಖ್ಯಾನದಿಂದಲೇ ಭಗವದ್ಗೀತೆಯ ನಿಜವಾದ ದರ್ಶನವಾಗಲು ಸಾಧ್ಯ.

(ಮುಂದುವರೆಯುವುದು)

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಪ್ರವಚನ ಮಾಲಿಕೆ

ಭಾಗ–6

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹ: ಕೃಷ್ಣಾ

ಮೂರ್ಖರು ಅಂದರೆ ಯಾರು ಎಂದು ವಿದುರ ವಿವರಿಸುತ್ತಾನೆ

**ಶ್ರಾದ್ಧಂ ಪಿತೃಭ್ಯೋ ನೋದತ್ತೇ ದೈವತಾನಿ ನ ಚಾರ್ಚತಿ**
**ಸುಹೃನ್ಮಿತ್ರಂ ನ ಲಭತೇ ತಮಾಹುರ್ಮೂಢಚೇತಸಂ**

ಒಂದು ದಿವಸವೂ ದೇವರ ಪೂಜೆ ಮಾಡದವನೇ 'ಮೂರ್ಖ'. **'ದೈವತಾನಿ ನ ಚಾರ್ಚತಿ'** ದೇವತಾರಾಧನೆ ಎಂದರೆ ಭಗವಂತನ ಆರಾಧನೆ. ಭಗವಂತನ ಆರಾಧನೆಯನ್ನು ನಾವು ಹಾಡುವ ಮೂಲಕ, ಸಾಲಿಗ್ರಾಮ ಅರ್ಚನೆಯ ಮೂಲಕ, ಇನ್ನೂ ಬೇರೆ ಬೇರೆ ರೀತಿಯಲ್ಲಿ ಮಾಡಬಹುದು. ಇಂತಹ ಯಾವ ರೀತಿಯಲ್ಲಿಯೂ ಭಗವಂತನ ಆರಾಧನೆಯನ್ನು ಮೂರ್ಖನು ಮಾಡುವುದಿಲ್ಲ **'ಶ್ರಾದ್ಧಂ ಪಿತೃಭ್ಯೋ ನೋದತ್ತೇ'** – ವರ್ಷಕ್ಕೊಂದು ಬಾರಿ ತನ್ನ ತಂದೆ ತಾಯಿಯರನ್ನು ಎಣಿಸದಿರುವವನನ್ನು 'ಮೂರ್ಖ' ಎಂದು ಕರೆದರು. ಗಯಾಕ್ಷೇತ್ರಕ್ಕೆ ಹೋಗಿ ಪಿಂಡಪ್ರದಾನ ಮಾಡಬೇಕು. ಇಲ್ಲವಾದಲ್ಲಿ ಗಯಾಕ್ಷೇತ್ರವನ್ನು ತನ್ನಲ್ಲಿಗೆ ತಂದುಕೊಂಡು ಅಂದರೆ ಮನೆಯಲ್ಲಿದ್ದ ವಿಷ್ಣುಪಾದದ ಮೇಲೆ ಪಿಂಡ ಪ್ರದಾನ ಮಾಡಬೇಕು. **'ತ್ರಿಭಿಃ ಪುತ್ರಸ್ಯ ಪುತ್ರತಾ'** ಎನ್ನುತ್ತಾರೆ. ಯಾವನೇ ಒಬ್ಬ 'ಮಗ' ಎಂದು ಅನಿಸಿಕೊಳ್ಳಬೇಕಾದರೆ ಅವನಲ್ಲಿ ಈ ಮೂರು ಗುಣಗಳಿರಬೇಕು. **'ಜೀವತೋ ವಾಕ್ಯ ಕರಣಾತ್ ಪ್ರತ್ಯಬ್ಧಂ ಭೂರಿಭೋಜನಾತ್ ಗಯಾಯಾಂ ಪಿಂಡದಾನಾಚ್ಚ'** ಬದುಕಿರುವಾಗ ಅಪ್ಪನ ಮಾತನ್ನು ನಡೆಸಿಕೊಡಬೇಕು. ಅಪ್ಪನ ಹೆಸರಿನಲ್ಲಿ ವರ್ಷಕ್ಕೊಂದು ಬಾರಿ ಎಲ್ಲರಿಗೂ ಒಂದು ಸಂತರ್ಪಣೆ ಮಾಡಬೇಕು ಹಾಗೂ ಜೀವನದಲ್ಲಿ ಗಯಾಕ್ಷೇತ್ರಕ್ಕೆ ಒಮ್ಮೆಯಾದರೂ ಹೋಗಿ ಪಿಂಡಪ್ರದಾನ ಮಾಡಬೇಕು. ಹೀಗೆ ಮಾಡಿದರೆ ಅವನಿಗೆ ಪುತ್ರತ್ವ ಬಂದು ಬಿಡುತ್ತದೆ.

ಗಯಾಕ್ಷೇತ್ರದಲ್ಲಿ ಒಮ್ಮೆ ಪಿಂಡಪ್ರದಾನ ಮಾಡಿದರೆ ಮತ್ತೆ ಎಂದೂ ಪಿಂಡ ಪ್ರದಾನ ಮಾಡಬೇಕಾಗಿಲ್ಲ ಎಂದು ಶಾಸ್ತ್ರದಲ್ಲಿ ಎಲ್ಲಿಯೂ ಕೂಡ ಹೇಳಲಿಲ್ಲ. ಅದು ಎಲ್ಲಿಯಾದರು ರೂಢಿಯಲ್ಲಿ ಬಂದಿದ್ದರೆ ಅದು ಫಲದ ಆಸೆ ತೋರಿಸಲು, ಒಂದು ಬಾರಿಯಾದರೂ ಕ್ಷೇತ್ರದರ್ಶನ ಮಾಡಿಕೊಂಡು ಪಿಂಡಪ್ರದಾನ ಮಾಡಲಿ ಎನ್ನುವ ಉದ್ದೇಶದಿಂದ ಮಾತ್ರ. ತಾಯಿಯು ಮಗುವಿಗೆ ಬೆಲ್ಲ ತೋರಿಸಿ ಔಷಧಿ ಕುಡಿಸಿದಂತೆ.

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಹಾಗಾದರೆ, ದೇಹವಿರುವಷ್ಟು ಕಾಲ ಪ್ರತಿ ವರ್ಷವೂ ಗಯಾಕ್ಷೇತ್ರಕ್ಕೆ ಹೋಗಿ ಪಿಂಡ ಪ್ರದಾನ ಮಾಡಿ ಬರಬೇಕು. ಯಾಕೆಂದರೆ ಈ ದೇಹವಿರುವವರೆಗೂ, ಈ ದೇಹಕ್ಕೂ ಅಪ್ಪನಿಗೆ ಕೊಡತಕ್ಕ ಪಿಂಡಕ್ಕೂ ಋಣ ಉಳಿದಿರುತ್ತದೆ. ಆದ್ದರಿಂದ ಈ ದೇಹವನ್ನು ಇಟ್ಟುಕೊಂಡಿರುವ ತನಕ ಪ್ರತೀವರ್ಷ ತಂದೆ ತಾಯಿಯರು ಸತ್ತದಿನದಂದು ಪಿಂಡ ಹಾಕಲೇಬೇಕು. ಗಯಾಕ್ಷೇತ್ರಕ್ಕೆ ಹೋದದ್ದರಿಂದ ಪಿಂಡ ಹಾಕಬೇಕಾಗಿಲ್ಲ ಎನ್ನ ತಕ್ಕಂತಹದ್ದನ್ನು 'ಅರ್ಥವಾದ' ಎನ್ನುವ ಶಬ್ದದಿಂದ ಹಿರಿಯರು ಹೇಳಿದ್ದಾರೆ. ಆದುದರಿಂದ ಹೇ! ಧೃತರಾಷ್ಟ್ರನೇ ಯಾರು ತನ್ನ ಅಪ್ಪ ಅಮ್ಮನನ್ನು ಎಣಿಸಿಕೊಂಡು ಪಿಂಡಪ್ರದಾನ ಮಾಡುವುದಿಲ್ಲವೋ ಅವನೇ ಸಾಮಾಜಿಕವಾಗಿ, ಅಧ್ಯಾತ್ಮಿಕ ಕ್ಷೇತ್ರದಲ್ಲಿ ದೊಡ್ಡ ಮೂರ್ಖನಾಗಿ ನಿಲ್ಲುತ್ತಾನೆ.

'ದೈವತಾನಿ' ಎಂಬ ಶಬ್ದವನ್ನು ಇಲ್ಲಿ ಪ್ರಯೋಗ ಮಾಡಿದ್ದಾರೆ. ಮಹಾಭಾರತದಲ್ಲಿ ಬರೇ ಭಗವಂತನ ಆರಾಧನೆಯನ್ನು ಹೇಳಲಿಲ್ಲ. ಕೇವಲ ದೇವರನ್ನು ಅಥವಾ ಕೇವಲ ದೇವತೆಗಳನ್ನು ಆರಾಧನೆ ಮಾಡುವವನನ್ನು 'ಮೂರ್ಖ' ಎಂದು ಕರೆದರು. ಇತರ ದೇವತೆಗಳ ಸಹಿತವಾಗಿ ಭಗವಂತನ ಆರಾಧನೆ. ಅಂದರೆ 'ದೈವ-ದೈವತ' ಎರಡನ್ನೂ ಆರಾಧನೆ ಮಾಡುವವರನ್ನು 'ಪಂಡಿತ' ಎಂದು ಕರೆದರು. ವಿದುರನು ಧೃತರಾಷ್ಟ್ರನನ್ನು ಕುರಿತು ನೀನು ಮೂರ್ಖರ ಪಟ್ಟಿಯಲ್ಲಿ ಸೇರುತ್ತಿ ಎಂದು ಹೇಳಿದನು. ಯಾಕೆಂದರೆ ಅವನು ಕೃಷ್ಣನನ್ನು ದೊಡ್ಡವನೆಂದು ಕರೆದು ಕೃಷ್ಣ ಭಕ್ತರಾದ ಪಾಂಡವರನ್ನು ಅಷ್ಟೇ ತಿರಸ್ಕಾರ ಮಾಡಿದನು. ಧೃತರಾಷ್ಟ್ರನು ಒಮ್ಮೆ ಕೃಷ್ಣನ ಬಗ್ಗೆ ಒಂದು ಉದ್ಗಾರ ತೆಗೆದಿದ್ದನು. **'ಭೂಭಾರ ಸಂಹೃತಿ ಕೃತೇ ಸಃ ಇಹ ಅವತೀರ್ಣಃ ನವಯಂ ಸ್ವತಂತ್ರಾಃ'** ಎಂದು ಪಾಂಡವರು ತಂದೆ ಇಲ್ಲದ ಮಕ್ಕಳು. ಕೌರವರು ಪಾಂಡವರು ಎಂದು ಪಕ್ಷಪಾತ ಮಾಡದೆ, ತನ್ನ ಮಕ್ಕಳಂತೆ ನೋಡಿಕೊಳ್ಳಲು ಅಕ್ರೂರನು ಧೃತರಾಷ್ಟ್ರನಿಗೆ ಹೇಳಿದಾಗ ತಾನೇನು ಮಾಡಲು ಸಾಧ್ಯವಿಲ್ಲ. 'ಎಲ್ಲಾ ದೈವ ಪ್ರೇರಣೆ ' ಎಂದು ಕೈಚೆಲ್ಲಿಬಿಟ್ಟಿದ್ದ. ಕೃಷ್ಣನ ಬಗ್ಗೆ ಸ್ವಲ್ಪ ತಿಳುವಳಿಕೆ ಉಳ್ಳವನಾಗಿ, ಪಾಂಡವರನ್ನು ಕಡೆಗಣಿಸಿದನು. ಈ ಕಾರಣದಿಂದ ವಿದುರನು ಧೃತರಾಷ್ಟ್ರನನ್ನು ಮೂರ್ಖನೆಂದು ಕರೆದನು.

**'ಸುಹೃನ್ಮಿತ್ರಂ ನ ಲಭತೇ'**– ಸಮಾಜದಲ್ಲಿ ಒಬ್ಬ ಮಿತ್ರ ಇರಬೇಕು. **'ಮಿತ್ರಂ ತ್ರಾಯತೇಇತಿ ಮಿತ್ರಂ'** ಸಾಮಾಜಿಕವಾಗಿ ಬೆಳೆಯುತ್ತಿರುವವನಿಗೆ, ಕಾಲಕಾಲಕ್ಕೆ ಎಚ್ಚರಿಕೆ ಕೊಡತಕ್ಕಂತಹ ಒಬ್ಬ ವ್ಯಕ್ತಿ–ಮಿತ್ರ. ಇಲ್ಲವೆಂದಾದರೆ ಅವನನ್ನು ಮೂರ್ಖ ಎಂದು ಕರೆಯುತ್ತಾರೆ. ಧೃತರಾಷ್ಟ್ರನಿಗಾಗಲಿ, ಅವನ ಮಕ್ಕಳಿಗಾಗಲಿ ಮಿತ್ರರಿರಲಿಲ್ಲ. ಅಂತವರನ್ನು ಸಮಾಜ ಮೂರ್ಖ ಎನ್ನುವ ಶಬ್ದದಿಂದ ಕರೆಯುತ್ತದೆ.

(ಮುಂದುವರಿಯುವುದು)

**ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ
ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಮೊದಲಿನ ಹದಿನಾಲ್ಕು ಅಕ್ಷರಗಳನ್ನು ಸ್ವರಗಳೆಂದು ಯಾಕೆ ಹೇಳಿದರು? "ಸ್ವಯಮೇವ ರಾಜಂತೇ ಇತಿ ಸ್ವರಾಃ". ಅಂದರೆ ಸ್ವತಂತ್ರವಾದ ಶಬ್ದಗಳು. ಆದ್ದರಿಂದ ಸ್ವರಗಳು. ವ್ಯಂಜನಗಳನ್ನು ಉಚ್ಚರಿಸಬೇಕಾದರೆ ಸ್ವರದ ಸಹಾಯ ಬೇಕು. ಸ್ವರದ ಸಹಾಯವನ್ನು ಪಡೆದ ಶಬ್ದಗಳು. ಆದ್ದರಿಂದ ವ್ಯಂಜನಗಳೆಂದು ಕರೆದರು. ಸ್ಪರ್ಶಗಳು ಎಂದರೆ ಏನು? ಸ್ಪರ್ಶ ಮಾಡಿ ಹೇಳುವ ಶಬ್ದಗಳಿಗೆ ಸ್ಪರ್ಶಗಳೆಂದು ಹೆಸರು. 'ಕ' ವರ್ಗ ಹೇಳುವಾಗ ಶಬ್ದ ಕಂಠವನ್ನು ಸ್ಪರ್ಶಿಸುತ್ತದೆ. 'ಚ' ವರ್ಗ ಹೇಳುವಾಗ ನಾಲಿಗೆ ಮೇಲಿನ ಭಾಗಕ್ಕೆ ತಾಗುತ್ತದೆ. 'ಟ' ವರ್ಗ ಹೇಳುವಾಗ ನಾಲಿಗೆ ಇನ್ನೂ ಸ್ವಲ್ಪ ಮಡಿಚಿ ಮೇಲೆ ತಾಗುತ್ತದೆ. 'ತ' ವರ್ಗ ಹೇಳುವಾಗ ನಾಲಿಗೆ ಹಲ್ಲನ್ನು ಸ್ಪರ್ಶಿಸುತ್ತದೆ. 'ಪ' ವರ್ಗ ಹೇಳುವಾಗ ತುಟಿಗಳು ಪರಸ್ಪರ ಸ್ಪರ್ಶಿಸುತ್ತದೆ. ಅಂತಸ್ತ ಎಂದರೆ ಮದ್ಯ ಇರುವಂಥದ್ದು. ಇದನ್ನು ನಪುಂಸಕ ಶಬ್ದಗಳೆಂದು ಸಹ ಹೇಳುತ್ತಾರೆ. ಊಷ್ಮ ಶಬ್ದಗಳೆಂದರೆ ಈ ಶಬ್ದಗಳನ್ನು ಉಚ್ಚರಿಸಿದಾಗ ಉಷ್ಣ?? ಉತ್ಪತ್ತಿಯಾಗುತ್ತದೆ. ಇಲ್ಲಿ ಳ ಹಾಗೂ ಕ್ಷಗಳನ್ನು ಸೇರಿಸಿಲ್ಲ. ಇವಿಷ್ಟು ಋಗ್ವೇದದ ಪ್ರಾತಿಶಾಖ್ಯೆಯಲ್ಲಿ ಹೇಳಿದ್ದು. ಯಜುರ್ವೇದದಲ್ಲಿ ಬೇರೆಯೇ ಹೇಳಿದೆ.

ಋಕ್ ಪ್ರಾತಿಶಾಖ್ಯೆ, ಯಜುರ್ವೇದದ ಪ್ರಾತಿಶಾಖ್ಯೆಗಳು ವರ್ಣಗಳ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳುತ್ತವೆ. ಅಲ್ಲದೆ ಶೀಕ್ಷಾಶಾಸ್ತ್ರ, ಪಾಣಿನಿವ್ಯಾಕರಣ ಹಾಗೂ ನಾರದಶೀಕ್ಷಾಶಾಸ್ತ್ರದಲ್ಲಿ ಸಹ ವರ್ಣಗಳ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ. ಅಂದರೆ ವರ್ಣಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ. ಋಗ್ವೇದದಲ್ಲಿ ಐವತ್ತಮೂರು ಅಕ್ಷರಗಳಿವೆ ಎಂದು ಹೇಳಿದೆ. ಋಗ್ವೇದದ ಐವತ್ತಮೂರು ಅಕ್ಷರಗಳಾವುವು. ಅ–ಇ–ಉ–ಋ–ಲ್ – ಐದು. ಇದರ ದೀರ್ಘಾಕ್ಷರಗಳು=ಐದು. ಹೀಗೆ 5 +5=10. ಏ–ಐ–ಓ–ಔ– ನಾಲ್ಕು. 10+4=14. ವರ್ಗಾಕ್ಷರಗಳು–ಇಪ್ಪತ್ತೈದು. 14+25=39. ಯ–ರ–ಲ–ವ–ಶ–ಷ–ಸ–ಹ–ಎಂಟು. 39+8 =47. ಅನುಸ್ವರ ಹಾಗೂ ವಿಸರ್ಗ– ಎರಡು. 47+2=49. 'ಕ' ಕಾರದ ಒಟ್ಟಿಗೆ ಹಾಗೂ 'ಪ' ಕಾರದ ಒಟ್ಟಿಗೆ ಬರುವ ವಿಸರ್ಗಗಳು–ಎರಡು. 49+2=51. ಇದಕ್ಕೆ ಳ ಮತ್ತು ಕ್ಷ ಸೇರಿದರೆ ಐವತ್ತಮೂರು ಅಕ್ಷರಗಳು ಹೇಳಿದ್ದಾರೆ. ಇದು ಋಕ್ ಪ್ರಾತಿಶಾಖ್ಯೆಯಲ್ಲಿ ಹೇಳಿದ ಕ್ರಮ.

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಸ್ವರಗಳಲ್ಲಿ ಮೊದಲ 8 ಅಕ್ಷರಗಳನ್ನು ಸಮಾನಾಕ್ಷರಗಳೆಂದು ಕೊನೆಯ ನಾಲ್ಕು ಅಕ್ಷರಗಳನ್ನು ಸಂಧಿ ಅಕ್ಷರಗಳೆಂದು ಹೇಳಿದರು. ಅ+ಇ = ಏ. ಅ+ಉ= ಓ ಹೀಗೆ ಸಂಧಿಯಿಂದ ಉಂಟಾದ ಅಕ್ಷರಗಳಾದುದರಿಂದ ಸಂಧಿ ಅಕ್ಷರಗಳೆಂದು ಹೇಳಿದರು. ಇಪ್ಪತ್ತೈದು ವರ್ಗಾಕ್ಷರಗಳಿಗೆ ಸ್ಪರ್ಷಗಳೆಂದು, ಯ–ರ–ಲ–ವಗಳನ್ನು ಅಂತಸ್ಥಗಳೆಂದು, ಶ–ಷ–ಸ–ಹಗಳನ್ನು ಉಷ್ಮಾಕ್ಷರಗಳೆಂದು ಕರೆಯುತ್ತಾರೆ. ಅಲ್ಲದೆ ಷ್ಕ ಹಾಗೂ ಷ್ಪಗಳನ್ನೂ ಸಹ ಉಷ್ಮಾಕ್ಷರಗಳೆಂದು ಕರೆಯುತ್ತಾರೆ. ಕಖ–ಚಛ–ಟಠ–ತಥ–ಪಫ–ಶ–ಷ–ಸ–ಹ ಇವುಗಳನ್ನು ಅಘೋಷಾಕ್ಷರಗಳೆಂದು ಹೇಳುತ್ತಾರೆ. ಏಕೆಂದರೆ ಇವುಗಳನ್ನು ಉಚ್ಚರಿಸುವಾಗ ಕುತ್ತಿಗೆಯ ನಾಳಗಳು ಅರಳುತ್ತವೆ. ಆದ್ದರಿಂದ ಗಾಳಿ ಹೆಚ್ಚು ಬಂದು ಸದ್ದು ಕಡಿಮೆ ಉಂಟಾಗುತ್ತದೆ. ಗಘ–ಜಝ–ಡಢ–ದಧ–ಬಭ–ಯ–ರ–ಲ–ವ ಇವುಗಳನ್ನು ಘೋಷಾಕ್ಷರಗಳೆನ್ನುತ್ತಾರೆ. ಙ–ಞ–ಣ–ನ–ಮ ಇವುಗಳನ್ನು ಅನುನಾಸಿಕ ಶಬ್ದಗಳೆನ್ನುತ್ತಾರೆ.

ಯಜುರ್ವೇದದಲ್ಲಿ ಐವತ್ತೈದು ವರ್ಣಗಳಿವೆ ಎಂದು ಹೇಳುತ್ತಾರೆ. ಬಳಕೆಯಲ್ಲಿ ಇಲ್ಲದ ವರ್ಣಗಳನ್ನು ಈ ವೇದದಲ್ಲಿ ಹೇಳಿದ್ದಾರೆ. ಅ, ಅ (ದೀರ್ಘ) ಆ = 3. ಹೀಗೆ 'ಆ' ಕಾದರ 3 ಸ್ವರಗಳು, 'ಇ'–ಕಾರದ 3 ಸ್ವರಗಳು. 'ಉ'–ಕಾರದ ಮೂರು ಸ್ವರಗಳು ಹೀಗೆ ಒಂಬತ್ತು. 'ಕ್ಲಪ್ತ' ಎಂಬ ಶಬ್ದದಲ್ಲಿ ಓದಿದ ಲ್ ಕಾರ ಇದಕ್ಕೆ ದೀರ್ಘ ಇಲ್ಲ. ಹ್ರಸ್ವ, ದೀರ್ಘ ಪ್ಲುತಗಳೆಂದು (ಅಅಆ–ಇಇಈ–ಉಉಊ=3+3+3) ಒಂಬತ್ತು. ಋ+ಋ+ೠ=ಮೂರು. 3+9=12 ಏ–ಐ ಓ–ಔ–ನಾಲ್ಕು. 4+12=16. ಇವು ಹದಿನಾರು ಸ್ವರಗಳು. ಇಪ್ಪತ್ತೈದು ಸ್ಪರ್ಶಗಳು.16+25=41 ಅಲ್ಲದೆ ಕ–ಖ–ಗ–ಘ ಎಂಬ ನಾಲ್ಕು ಅಕ್ಷರಗಳು ಮೂಗಿನಲ್ಲಿ ಉಚ್ಚರಿಸಲ್ಪಡುವ ಶಬ್ದಗಳು. 41+4=45 ಪಲಿಕ್ನಿಃ ಅಗ್ನಿಃ ಎಂಬಲ್ಲಿ ಮೊದಲಿನ ಕ ಹಾಗೂ ಗ ಅಕ್ಷರಗಳು ಮೂಗಿನಲ್ಲಿ ಉಚ್ಚರಿಸಲ್ಪಟ್ಟು ನಂತರದ್ದು ಕಂಠದಿಂದ ಉಚ್ಚರಿಸಲ್ಪಡುವಂತಾದ್ದು. ಯ–ರ–ಲ–ವ–ನಾಲ್ಕು. 45+4=49. ಶ–ಷ–ಸ–ಹ=ನಾಲ್ಕು 49+4=53 ಅಂ–ಅಃ–ಎರಡು. 53+2=55. ಳಕಾರ ಸೇರಿಸಿದರೆ ಐವತ್ತಾರು. 'ಕ' ಕಾರದ ಮತ್ತು 'ಪ' ಕಾರದ ಒಟ್ಟಿಗೆ ಬರುವ ವಿಸರ್ಗಗಳನ್ನು ಸೇರಿಸಿದರೆ ಐವತ್ತೆಂಟು. 'ಲ್' ಕಾರ ಸೇರಿಸಿದರೆ ಐವತ್ತೊಂಬತ್ತು. ಲ್ ಕಾರದ ದೀರ್ಘ, ಪ್ಲುತಗಳನ್ನು ಸೇರಿಸಿದರೆ ಅವರವತ್ತೊಂದು, ಕ್ಷ ಸೇರಿಸಿದರೆ ಒಟ್ಟು ಅವರತ್ತೆರಡು ಅಕ್ಷರಗಳು.

ನಾರದೀಯ ಶೀಕ್ಷಾ ಶಾಸ್ತ್ರದಲ್ಲಿ 63 ಅಥವಾ 64 ಅಕ್ಷರಗಳಿವೆ. ವರ್ಣಗಳನ್ನು ಹೇಳುವಾಗ ಸಂಭವತಃ ಎಂದು ಹೇಳುತ್ತಾರೆ. ಇಷ್ಟೇ ಅಕ್ಷರಗಳೆಂದು ಕರಾರುವಾಕ್ಕಾಗಿ ಹೇಳುವದಿಲ್ಲ. ಏಕೆಂದರೆ ಅಕ್ಷರಗಳು ಅನಂತವಾಗಿವೆ. ಇನ್ನೊಂದು ವಿಧಾನವನ್ನು ಹೇಳಿದ್ದಾರೆ.

(40ನೇ...ಪುಟಕ್ಕೆ)

**ಪ್ರತಿದಿನ ಆತನನ್ನು ಪೂಜಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಪಂಚಭೂತದ ಕಾಯದೊಳು ನೀ**
**ವಂಚಿಸದೆ ಇರುತಿರಲು ಪೂರ್ವದ**
**ಸಂಚಿತದ ಫಲವೆನ್ನಲೇಕಿದು ಮರುಳುತನದಿಂದ ।**
**ಮಿಂಚಿದವರಿನ್ನುಂಟೆ ತಿಳಿಯೆ ಪ್ರ**
**ಪಂಚವೆಲ್ಲಕೆ ತಪ್ಪಿದವ ನೀ**
**ಕೊಂಚಗಾರನೆ ಕೃಷ್ಣ ರಕ್ಷಿಸು ನಮ್ಮನನವರತ ॥೫೮॥**

ಪಂಚಭೂತಗಳಿಂದ ನಿರ್ಮಿತವಾದ ಶರೀರದಲ್ಲಿ ನೀನು ವಂಚಿಸದೆ ಇರುತ್ತಿರುವಾಗ ಇದು ಪೂರ್ವಜನ್ಮದ ಪಾಪದ ಫಲವಾಗಿ ಬಂದಿದೆ ಎಂದೇಕೆ ಹೇಳಬೇಕು? ಶರೀರದಲ್ಲಿ ನಾನೇ ಇದ್ದು ಮಹತ್ಕಾರ್ಯಸಾಧನೆಯನ್ನು ನಾನೇ ಮಾಡುತ್ತೇನೆ ಎಂದು ತಿಳಿಯುವುದು ಮರುಳುತನ. ಈ ಮರುಳುತನದಿಂದ ಮಿಂಚಿದವರು ಇನ್ನು ಉಂಟೇ? ತಿಳಿದಾಗ ಪ್ರಪಂಚವೆಲ್ಲಕ್ಕೂ ಕಾಣದಂತಿದ್ದು ತಪ್ಪಿದವನು ನೀನು. ನೀನೇನು ಸಾಮಾನ್ಯನೆ? ಕೃಷ್ಣ, ನಮ್ಮನ್ನು ಸದಾ ಕಾಪಾಡು.

## ಪಂಚಭೂತದ ಕಾಯದೊಳು ನೀ ವಂಚಿಸದೆ ಇರುತಿರಲು

ಪಾಂಚಭೌತಿಕವಾದ ಈ ಶರೀರ ಪಂಚಭೂತಗಳಿಂದ ಮಾತ್ರವಲ್ಲದೆ ಮಹದಾದಿತತ್ವಗಳಿಂದಲೂ ನಿರ್ಮಿತವಾಗಿವೆ. ಅದಕ್ಕೆ ಮೊದಲು ಇಪ್ಪತ್ತನಾಲ್ಕು ತತ್ವಗಳಿಂದಾಗಿರುವ ಪುರುಷನ ವೀರ್ಯದಲ್ಲಿ ಸಂಕರ್ಷಣನಾಮಕನಾದ ಹರಿ ಹುಟ್ಟಲಿರುವ ಜೀವನೊಂದಿಗೆ ಇದ್ದು ಆ ಮೂಲಕ ತಾಯಿಯಗರ್ಭವನ್ನು ಸೇರುತ್ತಾನೆ. ಇದು ಹರಿಗೆ ಮೊದಲನೆ ಜನ್ಮ. ಬಳಿಕ ಗರ್ಭದಲ್ಲಿ ಶಿಶು ಬೆಳೆದಾಗ ಪ್ರಸವವಾಗುವುದು ಹರಿಗೆ ಎರಡನೇ ಜನ್ಮ ಎಂದು ಉಪನಿಷತ್ತಿನಲ್ಲಿ ಹೇಳಿದೆ. ಜೀವನ ಜನ್ಮವೆ ಮುಖ್ಯವಾಗಿ ಹರಿಯ ಜನ್ಮ. ಜೀವನಿಗೆ ಅದರಲ್ಲಿ ದುಃಖವಿದೆ, ಹರಿಗೆ ಇಲ್ಲ, ಅವನಿಗೆ ಅದು ಕೇವಲ ಲೀಲೆ ಎಂಬುದೇ ವ್ಯತ್ಯಾಸ. ಹೀಗಾಗಿ ಪಂಚಭೂತದ ಕಾಯದಲ್ಲಿ ಹರಿ ವಂಚನೆ ಇಲ್ಲದೆ ಇರುತ್ತಾನೆ.

ಮುಂದೆ ವಾಸುದೇವ ನಾಮಕವಾದ ಹರಿಯ ಇನ್ನೊಂದು ರೂಪ ಅನಿರುದ್ಧ,

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.**

ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಎಂದು ಐದು ರೂಪ ತಳೆದು ಶರೀರದ ಕಾಲು ತೊಡೆ ಹೊಟ್ಟೆ ಎದೆ ತಲೆಗಳಲ್ಲಿರುತ್ತಾನೆ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂದು ಪಂಚಕೋಶಗಳಲ್ಲಿಯೂ ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣರೂಪಗಳಿಂದ ಇರುತ್ತಾನೆ. ಸುಷುಮ್ನಾನಾಡಿಯಲ್ಲಿ ಮೂಲಾಧಾರ, ನಾಭಿ, ಹೃದಯ, ತಾಲು, ಭ್ರೂಮಧ್ಯ, ಶಿರಸ್ಸುಗಳಲ್ಲಿರುವ ಆರು ಕಮಲಗಳಲ್ಲಿ ಕ್ರಮವಾಗಿ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ಅನಿರುದ್ಧ, ನಾರಾಯಣ ಎಂಬ ಆರುರೂಪಗಳಿಂದ ಇರುತ್ತಾನೆ. ಮತ್ತು ಈ ಆರು ಕಮಲಗಳಲ್ಲಿಯೇ ಧನ್ವಂತರಿ ನಾಮಕ ಹರಿ ಆರು ರೂಪಗಳಿಂದ ಇದ್ದು ಅಮೃತವನ್ನು ಸುರಿಸುತ್ತ ಶರೀರದ ಎಲ್ಲ ನಾಡಿಗಳಲ್ಲಿ ಅಮೃತಪ್ರವಾಹದಿಂದ ಪಾಪಾದಿ ಸರ್ವದೋಷಗಳನ್ನು ಪರಿಹರಿಸುತ್ತಾನೆ, ಶರೀರವನ್ನು ಸುಸ್ಥಿತಿಯಲ್ಲಿ ಆರೋಗ್ಯಪೂರ್ಣವಾಗಿರಿಸುತ್ತಾನೆ.

**'ಜನ್ಮ ಪ್ರಭೃತಿ ಗೌರ್ನಾಸ್ತಿ ಪಯಃ ಪಿಬತಿ ನಿತ್ಯಶಃ'**

ಜನ್ಮದಲ್ಲಿ ಹಸುವನ್ನು ಸಾಕುವುದಿಲ್ಲ, ನಿತ್ಯ ಕದ್ದು ಹಾಲು ಕುಡಿಯುತ್ತದೆ ಬೆಕ್ಕು. ಹಾಗೆ ಜೀವಾತ್ಮನ ಕರ್ಮನಿರ್ಮಿತವಾದ ಶರೀರದಲ್ಲಿ ಕರ್ಮರಹಿತನಾದ ಪರಮಾತ್ಮ ವಾಸಮಾಡುವುದು ವಂಚನೆ ಎಂದು ತಿಳಿಯಬಾರದು. ಜೀವಾತ್ಮನ ಕರ್ಮವನ್ನು ನೋಡಿ ಅದಕ್ಕನುಸಾರವಾಗಿಯೇ ಕರ್ಮವಿಲ್ಲದ ಪರಮಾತ್ಮ ಶರೀರವನ್ನು ತಾನೇ ನಿರ್ಮಿಸಿ ಅದರ ಸುಸ್ಥಿತಿಗಾಗಿ ತಾನೇ ನಾನಾ ರೂಪಗಳಿಂದ ಅದರೊಳಗಿರುತ್ತಾನೆ, ಜೀವಾತ್ಮನನ್ನು ಜೊತೆಗೆ ಇರಿಸಿಕೊಳ್ಳುತ್ತಾನೆ. ನಾರಾಯಣ ಎಂಬ ಮೂಲ ರೂಪ ಒಂದರಿಂದಲೇ ಇಡೀ ಬ್ರಹ್ಮಾಂಡವನ್ನು ಅದರೊಳಗಿರುವ ಒಂದೊಂದು ಧೂಳಿನ ಕಣವನ್ನೂ ಇಚ್ಛಾಮಾತ್ರದಿಂದ ಸೃಷ್ಟಿಮಾಡಿ ದೂರನಿಂತು ರಕ್ಷಿಸಬಲ್ಲ. ಆದರೂ ಅವನ ಅನಂತ ಶಕ್ತಿಗಳಲ್ಲಿ ಒಂದೆರಡನ್ನಾದರೂ ಹುಲು ಮಾನವ ಉಪಾಸನೆ ಮಾಡಲಿ ಎಂದು ಲೀಲೆಯಿಂದ ನಾನಾ ರೂಪ ಧರಿಸಿ ನಾನಾ ಶಕ್ತಿಗಳನ್ನು ತೋರುತ್ತಾನೆ.

## ಪೂರ್ವದ ಸಂಚಿತದ ಫಲವೆನ್ನಲೇಕಿದು

ಪೂರ್ವಜನ್ಮದಲ್ಲಿ ಮಾಡಿ ಕೂಡಿಟ್ಟಿರುವ ಪಾಪದ ಫಲ ಈಗಿನ ಶರೀರ. ಇದನ್ನು ಕೊನೆಗಾಣಿಸಿಕೊಂಡರೇ ಮೋಕ್ಷ ಎಂದೇಕೆ ತಿಳಿಯಬೇಕು? ಶರೀರ ಬಂದು ಹೋಗುವ ಈ ಜನನ ಮರಣವೆನ್ನುವುದು ಜೀವನಿಗೆ ಶಾಪವಲ್ಲ. ಶಾಪವಲ್ಲದ್ದನ್ನು ಶಾಪವಾಗಿ ಜೀವ ತಾನೇ ಮಾಡಿಕೊಳ್ಳುತ್ತಿದ್ದಾನೆ. ಹರಿಭಜನೆಗೆ ಜೀವನನ್ನು ಸಮರ್ಥನನ್ನಾಗಿ ಮಾಡುವ

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**

ಉದ್ದೇಶದಿಂದ ಹರಿ ಜೀವನಿಗೆ ದೃಢವಾದ ಸಾಧನ ಶರೀರಕೊಟ್ಟು ಅದು ಹಳೆಯದಾಗಿ ರೋಗಗ್ರಸ್ತವಾಗಿ ಅದೃಢವಾದಂತೆಲ್ಲ ಹೊಸ ಶರೀರವನ್ನು ಕೊಡುತ್ತಾನೆ. ಆ ಶರೀರದಲ್ಲಿ ನಾನಾ ರೂಪಗಳಿಂದಿದ್ದು ತನ್ನ ಸನ್ನಿಧಾನದಿಂದ ಪವಿತ್ರಗೊಳಿಸುತ್ತಾನೆ. ಈ ಅನುಸಂಧಾನ ಉಳ್ಳವರಿಗೆ ಶರೀರ ಪರಮಪವಿತ್ರ, ಬಲು ದೊಡ್ಡ ವರ. ಅಜ್ಞಾನಿ ಮಾನವ. ಆ ಶರೀರದಿಂದ ಹರಿಭಜನೆ ಮಾಡದೆ ತನ್ನ ಸುಖಕ್ಕಾಗಿ ಹರಿಯನ್ನು ಮರೆತು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಶ್ರಮಿಸುತ್ತಾನೆ. ಅದರಿಂದ ಸುಖವಿಲ್ಲ, ದುಃಖವೆ. ಅದು ವರವಲ್ಲ, ಶಾಪವೆ.

### ಮರುಳುತನದಿಂದ ಮಿಂಚಿದವರಿನ್ನುಂಟೆ?

ಶರೀರದಲ್ಲಿ ನಾನೇ ಇದ್ದು ಎಲ್ಲವನ್ನೂ ನಾನೇ ಮಾಡುತ್ತೇನೆ, ನಾನೇ ಮಿಂಚುತ್ತೇನೆ. ಮಿಂಚಿನಂತೆ ಹೊಳೆಯುತ್ತೇನೆ, ಮಹತ್ಕಾರ್ಯ ಸಾಧನೆ ಮಾಡಿ ಹೆಸರುಗಳಿಸುತ್ತೇನೆ ಎಂದುಕೊಂಡರೆ ಅದು ಮರುಳುತನ. ಮರುಳುತನದಿಂದ ಮಿಂಚಿದವರಿಲ್ಲ. ಎಲ್ಲವನ್ನೂ ಹರಿ ಮಾಡುತ್ತಾನೆ. ಅವನೆ ಮಿಂಚುತ್ತಾನೆ. ಕಾದ ಕಬ್ಬಿಣದ ಗುಂಡು ಸುಟ್ಟರೆ ಅದರಲ್ಲಿರುವ ಬೆಂಕಿ ಸುಡುತ್ತದೆ ಕಬ್ಬಿಣದ ಗುಂಡಲ್ಲ.

### ತಿಳಿಯೆ ಪ್ರಪಂಚವೆಲ್ಲಕೆ ತಪ್ಪಿದವ ನೀ ಕೊಂಚಗಾರನೆ?

ವಿಚಾರ ಮಾಡಿ ತಿಳಿದುಕೊಂಡಾಗ ಎಲ್ಲವನ್ನೂ ಮಾಡುವವ ಹರಿ, ನೀನೇ. ಎಲ್ಲಾ ಕಡೆ ಎಲ್ಲವನ್ನೂ ಮಾಡುತ್ತಿದ್ದರೂ ಎಲ್ಲಿಯೂ ಕಾಣದೆ ಇರುತ್ತಾನೆ. ಕಣ್ಣಿಗೆ ರೆಪ್ಪೆ ಸದಾ ರಕ್ಷಣೆ ನೀಡುತ್ತ ಬಳಿಯಲ್ಲಿಯೇ ಇದ್ದರೂ ಕಣ್ಣಿಗೆ ಕಾಣುವುದಿಲ್ಲ. ಹಾಗೇ ನೀನೂ ಮಾಡುತ್ತಿ. ರೆಪ್ಪೆ ಹಾಗೆ ಮಾಡುವುದು ತಪ್ಪೇ ಆದರೂ ತಪ್ಪಲ್ಲ. ಏಕೆಂದರೆ ಅದು ಜಡ. ನೀನೂ ಹೀಗೆ ತಪ್ಪು ಮಾಡಬಹುದೆ? 'ಏನು ಮಾಡಲಿ? ಅದು ನನ್ನ ಸ್ವಭಾವ. ಸ್ವಭಾವತಃ ನಾನು ಅಧೋಕ್ಷಜ, ಇಂದ್ರಿಯಗಳಿಗೆ ಅತೀತ. ಒಲಿದರೆ ಮಾತ್ರ ಅಚಿಂತ್ಯ ಶಕ್ತಿಯಿಂದ ಗೋಚರನಾಗ ಬಲ್ಲೆ' ಎನ್ನುವಿಯ? ಇದಕ್ಕೆ ನಮ್ಮ ಆಕ್ಷೇಪಣೆ ಏನಿಲ್ಲ. ನೀನು ಸ್ವತಂತ್ರ. ನಿನ್ನಿಚ್ಛೆ ಬಂದಂತೆ ಮಾಡುವವ. ಹಾಗೆ ಮಾಡು. ನೀನೇನು ಸಾಮಾನ್ಯನೆ, ಕೊಂಚ, ಸ್ವಲ್ಪವಾಗಿ, ಏನೂ ಮಾಡುವವನಲ್ಲ. ನಿನ್ನ ಯಾವುದೇ ಕ್ರಿಯೆ, ಯಾವುದೇ ಗುಣ ರೂಪ ಪೂರ್ಣವಾಗಿರುತ್ತದೆ. ಅನಂತವಾಗಿರುತ್ತದೆ. ಪೂರ್ಣವೆಂದೇ, 'ಬ್ರಹ್ಮ' ಎಂದೇ ನಾವು ಅವುಗಳನ್ನು ಉಪಾಸನೆ ಮಾಡಬೇಕು ಎನ್ನುವಿ, 'ಬ್ರಹ್ಮದೃಷ್ಟಿರುತ್ಕರ್ಷಾತ್' ಎಂಬ ಸೂತ್ರದಲ್ಲಿ.

(19ನೇ...ಪುಟಕ್ಕೆ)

**ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.**

# ಶ್ರೀರಾಮಚಂದ್ರನೆಡೆಗೆ ಸಾಗಿದ ಕೊಟ್ಠಾರಿ ನಾರಾಯಣ ಉಪಾಧ್ಯಾಯರು

'ನಾರಾಯಣ'–ಎಂದೇ ಶ್ರೀಮಠದ ವಲಯದಲ್ಲಿ ಪ್ರಸಿದ್ಧರಾಗಿದ್ದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಕೊಟ್ಠಾರಿ ಶ್ರೀನಾರಾಯಣ ಉಪಾಧ್ಯಾಯರು 09–2008 ರ ...ವಾರದಂದು ಪ್ರಾತಃಕಾಲ ರಂದು ಶ್ರೀರಾಮಚಂದ್ರನೆಡೆಗೆ ಸಾಗಿರುವರು.

ಶ್ರೀ ರಾಮಕೃಷ್ಣ ಉಪಾಧ್ಯಾಯ–ಶ್ರೀಮತಿ ಮಹಾಲಕ್ಷ್ಮಿ ಇವರ ಪುತ್ರರಾಗಿ 25–06–1924ರಂದು ಜನಿಸಿದ್ದ ಶ್ರೀಯುತರು ಅನಂತೇಶ್ವರ ದೇವಸ್ಥಾನದಲ್ಲಿ ನಡೆಸಲಾಗುತ್ತಿದ್ದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಆರನೆಯ ತರಗತಿಯವರೆಗೆ ಅಧ್ಯಾಯನ ನಡೆಸಿದ್ದರು. ಹಾಗೂ ಪೂರ್ಣಯಜುರ್ವೇದಾಧ್ಯಯನವನ್ನು ಮಾಡಿದ್ದರು. ತಮ್ಮ ಹತ್ತನೆಯ ವಯಸ್ಸಿನಿಂದಲೇ ಉಡುಪಿ ಪಲಿಮಾರು ಮಠದಲ್ಲಿ ಕೊಟ್ಠಾರಿ ಆಗಿ ಸೇವೆಯನ್ನು ಪ್ರಾರಂಭಿಸಿದ್ದರು. ಶ್ರೀಮಠದ ಶ್ರೀ ಶ್ರೀ ರಘುಮಾನ್ಯತೀರ್ಥರ ಕಾಲದಿಂದ ಶ್ರೀ ಶ್ರೀ ವಿದ್ಯಾಧೀಶತೀರ್ಥರವರೆಗೆ ಸುಮಾರು 60ಕ್ಕಿಂತಲೂ ಅಧಿಕ ವರ್ಷಗಳ ಅವಧಿ ಶ್ರೀಮಠದ ಶ್ರೀರಾಮದೇವರ ಸೇವೆಯನ್ನು ಸಲ್ಲಿಸಿರುವರು.

ನಗುಮುಖದಿಂದ ಮಠದ ಎಲ್ಲರ ಜೊತೆಗೆ ಸೌಮ್ಯವಾಗಿ ವ್ಯವಹರಿಸುತ್ತಿದ್ದ ಶ್ರೀಯುತರು ನಿಷ್ಠೆಯಿಂದ, ವಿನೀತಭಾವದಿಂದ ಸಲ್ಲಿಸುತ್ತಿದ್ದ ಸೇವೆಯನ್ನು ಗುರುತಿಸಿ ಶ್ರೀ ಶ್ರೀ ವಿದ್ಯಾಧೀಶತೀರ್ಥರು ತಮ್ಮ ಶ್ರೀಕೃಷ್ಣಪೂಜಾಪರ್ಯಾಯಾವಧಿಯಲ್ಲಿ 06–01–2003ರಂದು **'ಶ್ರೀರಾಮಕೃಷ್ಣ ಸೇವಾ ದುರಂಧರ'**–ಎಂಬ ಪ್ರಶಸ್ತಿಯನ್ನು ನೀಡಿ ಅನುಗ್ರಹಿಸಿದ್ದರು.

ಶ್ರೀಯುತರ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ಶ್ರೀ ಶ್ರೀ ವಿದ್ಯಾಧೀಶತೀರ್ಥರು ನಾರಾಯಣ ಉಪಾಧ್ಯಾಯರಿಗೆ ಶ್ರೀರಾಮಚಂದ್ರನ ವಿಶೇಷ ಅನುಗ್ರಹ ಆಗಲೆಂದೂ, ಅವರ ಬಂಧುಗಳಿಗೆ ಅವರ ವಿಯೋಗ ದುಃಖವನ್ನು ಸಹಿಸುವ ಸಾಮರ್ಥ್ಯ ಉಂಟಾಗಲೆಂದೂ ಹಾರೈಸಿರುವರು.

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

ಕಥಾಸಂದೇಶ

ಭಾಗ: 6

# ಭಾರತಭಾವದರ್ಪಣ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಭೃಗುಮಹರ್ಷಿಗಳಿಗೆ ಪ್ರಲೋಮೆ ಪ್ರಿಯಭಾರ್ಯೆಯಾಗಿದ್ದರು. ಅಂದೊಮ್ಮೆ ಅಗ್ನಿಹೋತ್ರರಕ್ಷಣೆಗೆ ಗರ್ಭಿಣಿಯಾದ ಪ್ರಲೋಮೆಯನ್ನು ನಿಯೋಜಿಸಿ ಸ್ನಾನಕ್ಕೆಂದು ಹೊರ ಹೊರಟರು. ಅದೇ ಸಮಯಕ್ಕೆ ಪ್ರಲೋಮ ಎಂಬ ಹೆಸರಿನ ರಾಕ್ಷಸೊನೊಬ್ಬ ಭೃಗುವಿನ ಆಶ್ರಮಕ್ಕೆ ಬಂದನು. ಅವನ ಪೂರ್ವೋತ್ತರ ತಿಳಿಯದ ಪ್ರಲೋಮೆ ಅತಿಥಿಯೆಂದು ಭಾವಿಸಿ ಕಂದಮೂಲಫಲಗಳ ಆತಿಥ್ಯ ನೀಡಲು ಮುಂದಾದಳು. ಚೆಲುವೆಯಾದ ಪ್ರಲೋಮೆಯನ್ನು ಕಂಡು ಪುಳಕಿತನಾದ ಕಾಮುಕ ಪ್ರಲೋಮ. ಅವಳನ್ನು ಹಾರಿಸಿಕೊಂಡು ಹೋಗಬೇಕೆಂದು ನಿಶ್ಚಯಿಸಿದ.

ಹಿಂದೊಮ್ಮೆ ಸುಂದರಿ ಪ್ರಲೋಮೆಯನ್ನು ತನಗೆ ಮದುವೆ ಮಾಡಿಕೊಡೆಂದು ಪ್ರಲೋಮ ರಕ್ಕಸ ಪ್ರಲೋಮೆಯ ತಂದೆಯ ಬಳಿ ಕೇಳಿದ್ದ. ಇಷ್ಟವಿಲ್ಲದ ಅವನು ರಕ್ಕಸನಿಗೆ ಆಗಲಿ ಹೋಗು ಎಂದು ಹೇಳಿ ಸಾಗಿ ಹಾಕಿದ್ದ. ಬಳಿಕ ಪ್ರಲೋಮೆಯ ತಂದೆ ಅವಳನ್ನು ಭೃಗುವಿಗೆ ಕೊಟ್ಟು ಮದುವೆ ಮಾಡಿದ್ದನು. ಈಗ ಏಕಾಕಿನಿಯಾಗಿ ಸಿಕ್ಕ ಪ್ರಲೋಮೆಯನ್ನು ಪ್ರಲೋಮನು ಕಂಡು ಖುಷಿಯಾದ. ಕುಂಡದಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ಕಂಡ ಪ್ರಲೋಮನು ಅಗ್ನೇ! ಪ್ರಲೋಮೆ ನನ್ನ ಹೆಂಡತಿಯೋ ಭೃಗುವಿನ ಹೆಂಡತಿಯೇ? ಸತ್ಯ ಹೇಳು. ನಾನು ಹಿಂದೆ ಇವಳನ್ನು ಮನಸಾರೆ ವರಿಸಿದ್ದೆ. ಆದರೆ ನನಗೆ ಕೊಡುತ್ತೇನೆಂದು ಹೇಳಿ ಇವಳನ್ನು ಭೃಗುವಿಗೆ ಕೊಟ್ಟು ಸುಳ್ಳಾಡಿದ್ದಾನೆ ಇವಳ ತಂದೆ. ಈಗ ಸತ್ಯ ಹೇಳು. ನೀನು ದೇವತೆಗಳ ಮುಖ. ಇವಳು ಯಾರ ಹೆಂಡತಿ?

ಅಗ್ನಿಗೆ ಉಭಯ ಸಂಕಟ ಶುರುವಾಯ್ತು. ಅತ್ತ ಋಷಿ! ಇತ್ತ ರಕ್ಕಸ! ಸುಳ್ಳು ಹೇಳಲು ಧೈರ್ಯವಿಲ್ಲ. ಅಗ್ನಿ ಸಾಕ್ಷಿಯಾಗಿ ಕೈ ಹಿಡಿದ ಭೃಗುವಿನ ಧರ್ಮಪತ್ನಿ ಇವಳು. ಭೃಗುವಿಗಿಂತ ಮೊದಲು ನೀನು ವರಿಸಿದ ಪ್ರಲೋಮೆ ಬಳಿಕ ವಿಧಿವತ್ತಾಗಿ ತಂದೆಯಿಂದ ಭೃಗುವಿಗೆ ಪ್ರದತ್ತಳಾಗಿದ್ದಾಳೆಂದು ಸತ್ಯ ನುಡಿದ.

ರಕ್ಕಸ ಪ್ರಲೋಮೆಯನ್ನು ವರಾಹರೂಪದಿಂದ ಹಾರಿಸಿಕೊಂಡು ಹೋದ. ಕೂಡಲೆ ಪ್ರಲೋಮೆಯ ಗರ್ಭದಲ್ಲಿದ್ದ ಭೃಗುವಂಶದ ಕುಡಿಯಾದ ಗಂಡು ಮಗು ಚ್ಯುತವಾಗಿ

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು**

ಕೆಳಗೆ ಬಿತ್ತು. ಆ ಮಗುವಿನ ತೇಜಸ್ಸಿನಿಂದಾಗಿ ರಕ್ಕಸ ಬೂದಿಯಾದ. ಆ ಮಗುವೇ ಗರ್ಭಚ್ಯುತನಾದುದರಿಂದ ಚ್ಯವನನೆಂದು ಪ್ರಸಿದ್ಧವಾಯಿತು. ಜಾರಿದ ಮಗುವನ್ನು ಹಿಡಿದು ಪ್ರಲೋಮೆ ತನ್ನ ಪರಿಸ್ಥಿತಿಗಾಗಿ ಅಳುತ್ತ ಕೂತಳು. ಅದನ್ನು ಕಂಡ ಕರುಣಾಳು ವಿರಿಂಚಿ ಅವಳನ್ನು ಸಾಂತ್ವನಗೊಳಿಸಿದರು. ಅವಳ ಕಣ್ಣೀರು ಕೋಡಿಯಾಗಿ ಹರಿಯಿತು. ಅದು ನದಿಯಾಗಿ ಬ್ರಹ್ಮನಿಂದ 'ವಧೂಸರ' ಎಂದು ನಾಮಕರಣಗೊಂಡಿತು. ಭೃಗು ಆಶ್ರಮಕ್ಕೆ ಹರಿದು ಬಂತು ಆ ನದಿ. ಭೃಗುಋಷಿಗಳು ತನ್ನ ಹೆಂಡತಿ ಮಕ್ಕಳನ್ನು ಕಂಡು ಆತಂಕಗೊಂಡು ಆ ದುಷ್ಟರಕ್ಕಸನಿಗೆ ನೀನು ನನ್ನ ಹೆಂಡತಿ ಎಂದು ಹೇಳಿದವರಾರು ಹೇಳು? ಪ್ರಲೋಮನಿಗೆ ನೀನು ನನ್ನ ಭಾರ್ಯೆಯಾಗಿರುವುದು ತಿಳಿದಿಲ್ಲ. ಗುಟ್ಟು ರಟ್ಟು ಮಾಡಿದವರಿಗೆ ಶಾಪ ಕೊಡುತ್ತೇನೆಂದು ಉಗ್ರವಾಗಿ ಆರ್ಭಟಿಸಿದರು.

ಪ್ರಲೋಮೆ ಉಸುರಿದಳು– ಅಗ್ನಿಯೇ ರಕ್ಕಸನಿಗೆ ನಾನು ನಿಮ್ಮ ಪತ್ನಿ ಎಂಬ ಸಂಗಿಯನ್ನು ಅರುಹಿದನು. ರಕ್ಕಸ ನನ್ನನ್ನು ಹಾರಿಸಿಕೊಂಡು ಹೋದ. ಆಗ ಜಾರಿದ ಗರ್ಭವೇ ಚ್ಯವನನೆಂಬ ಈ ನಿಮ್ಮ ಮಗ.

ಅಗ್ನಿಯ ಅಧಿಕಪ್ರಸಂಗವನ್ನು ಕೇಳಿ ಕುಪಿತರಾದ ಭೃಗು ಮಹರ್ಷಿಗಳು ಅಗ್ನಿಗೆ ಸರ್ವಭಕ್ಷನಾಗೆಂದು ಶಪಿಸಿದರು. ಭೃಗುಶಾಪದಿಂದ ಕ್ರುದ್ಧನಾದ ಅಗ್ನಿ ನುಡಿದನು. ವಿಪ್ರರೇ! ಇದೆಂತಹ ಶಾಪ ಕೊಟ್ಟಿರಿ ನನಗೆ! ಪ್ರಲೋಮ ಕೇಳಿದಾಗ ಸತ್ಯ ಹೇಳಿದ್ದಕ್ಕೆ ಶಾಪವೇ? ಸಾಕ್ಷಿಯನ್ನಾಗಿ ನಮ್ಮನ್ನು ಪರಿಗಣಿಸಿ ಕೇಳಿದಾಗ ಗೊತ್ತಿದ್ದೂ ಹೇಳದಿರುವುದು ಮತ್ತು ಸುಳ್ಳು ಹೇಳುವುದು ಅಪರಾಧ. ಇಂತಹ ಅಪರಾಧದಿಂದ ಏಳು ತಲೆ ನಾಶವಾಗುತ್ತದೆ. ಹೀಗಿರುವಾಗ ಇಲ್ಲದ ಅಪರಾಧಕ್ಕೆ ಸಲ್ಲದ ಶಾಪವೇ? ನಾನೂ ತಮಗೆ ಶಾಪಕೊಡಬಲ್ಲೆ. ನೀವು ಬ್ರಾಹ್ಮಣರು ಮಾನ್ಯರೆಂದು ಸುಮ್ಮನಿದ್ದೇನೆ. ನಾನು ಅಗ್ನಿಹೋತ್ರ, ಸತ್ರ, ಮಖಗಳಲ್ಲಿ ವೇದೋಕ್ತ ವಿಧಾನದಿಂದ ನನ್ನಲ್ಲಿ ಹೋಮಿಸಿದ ಹವಿಸ್ಸನ್ನು ದೇವತೆಗಳಿಗೆ ತಲುಪಿಸುವವ ನಾನು. ನನ್ನಲ್ಲಿ ನಡೆಸುವ ಹೋಮದಿಂದ ಪಿತೃಗಳು ದೇವತೆಗಳು ಎಲ್ಲರೂ ಸಂತೃಪ್ತರಾಗುವರು. ಹುಣ್ಣಿಮೆಯಲ್ಲಿ ದೇವತೆಗಳು, ಅಮಾವಾಸ್ಯೆಯಲ್ಲಿ ಪಿತೃಗಳು ನನ್ನ ಮೂಲಕವೇ ಪೂಜಿತರಾಗುತ್ತಾರೆ. ಹುತವಾದ ಹವಿಸ್ಸನ್ನು ಭೋಗಿಸುತ್ತಾರೆ. ನಾನು ಸರ್ವಭಕ್ಷನಾದರೆ ದೇವಮುಖನಾಗುವುದು ಹೇಗೆ? ವಿಚಾರ ಮಾಡದೆ ಶಾಪ ಕೊಟ್ಟರಲ್ಲವೇ? ಹೀಗೆ ಅಗ್ನಿ ವಿಚಾರ ಮಾಡಿ ಎಲ್ಲೆಡೆ ಹರವಿಕೊಂಡಿದ್ದ ತನ್ನ ತೇಜೋಮೂರ್ತಿಯನ್ನು ಉಪಸಂಹಾರಗೊಳಿಸಿದ. ಅದರ ಪರಿಣಾಮವಾಗಿ ಅಗ್ನಿಯಿಲ್ಲದೆ ಬ್ರಾಹ್ಮಣರ ಅಗ್ನಿಹೋತ್ರ, ಯಜ್ಞ, ಸತ್ರಕ್ರಿಯೆಗಳೆಲ್ಲ ಸ್ತಬ್ಧವಾದವು. ಅಗ್ನಿಯ ನಾಶದಿಂದ

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

ಕ್ರಿಯಾನಾಶವಾಗಿ ಋಷಿಗಳು, ದೇವತೆಗಳೆಲ್ಲ ಕಳವಳಗೊಂಡರು. ಎಲ್ಲರೂ ಬ್ರಹ್ಮದೇವರಲ್ಲಿ ಶರಣಾಗಿ ಭೃಗುಶಾಪ, ಅಗ್ನಿಯ ಉಪಸಂಹಾರ, ಅದರ ಪರಿಣಾಮಗಳನ್ನೆಲ್ಲ ಅರುಹಿದರು. ದೇವಮುಖನಾದ ಅಗ್ನಿ ಸರ್ವಭಕ್ಷನಾದರೆ ಗತಿಯೇನು? ದೇವತೆಗಳ ಆತಂಕವನ್ನು ಆಲಿಸಿದ ಬ್ರಹ್ಮದೇವರು ಅಗ್ನಿಯನ್ನು ಕರೆದು ಅಗ್ನ್ಯಂತರ್ಗತನಾದ ಶ್ರೀಹರಿಯನ್ನು ಸ್ತುತಿಗೈದನು. ಎಲ್ಲರ ಯಾಗಕ್ರಿಯೆಯ ಪ್ರವರ್ತಕನಾದ ನೀನು ನಿನ್ನ ತೇಜೋಮೂರ್ತಿಯನ್ನು ಹೀಗೆ ಉಪಸಂಹಾರಗೊಳಿಸಿದರೆ ಹೇಗೆ? ನೀನು ನಿನ್ನೆಲ್ಲ ಮೂರ್ತಿಗಳಲ್ಲಿ ಸರ್ವಭಕ್ಷನಾಗುವುದಿಲ್ಲ. ನಿನ್ನ ಕ್ರವ್ಯಾದ ನಾಮಕ ತೇಜೋಮೂರ್ತಿ ಮಾತ್ರ ಸರ್ವಭಕ್ಷವಾಗುವುದು. ಹೇಗೆ ಸೂರ್ಯಕಿರಣದಿಂದ ಸ್ಪೃಷ್ಟವಾದುದೆಲ್ಲ ಪವಿತ್ರ ಎನಿಸುವುದೋ ಹಾಗೆ ನಿನ್ನ ಜ್ವಾಲೆಗಳಿಂದ ನಿರ್ದಗ್ಧವಾದುದೆಲ್ಲ ಶುಚಿಯಾಗುತ್ತದೆ. ಭೃಗುವಿನ ವಾಗಿಂದ್ರಿಯಾಭಿಮಾನಿಯಾದ ನಿನ್ನ ರೂಪದಿಂದಲೇ ಹೊರಟ ಶಾಪವನ್ನು ನೀನೇ ಸತ್ಯಗೊಳಿಸಿ ಶುಚಿಯಾಗಿಯೇ ಇರು. ನಿನ್ನ ಹಾಗೂ ದೇವತೆಗಳ ಹವಿಸ್ಸನ್ನು ಸ್ವೀಕರಿಸು ಎಂದು ಬ್ರಹ್ಮದೇವರು ವ್ಯವಸ್ಥೆಗೊಳಿಸಿದರು.

ಅಗ್ನಿ ಪ್ರಜ್ವಲನೆಗೊಂಡು ಯಜ್ಞಯಾಗಗಳ ಪ್ರಕ್ರಿಯೆಗಳು ಪ್ರಾರಂಭಗೊಂಡವು. ಋಷಿಮುನಿಗಳು ಮುದಗೊಂಡರು. ಪ್ರಜೆಗಳೆಲ್ಲ ಸಂತಸಗೊಂಡರು. ದೇವತೆಗಳೂ ಸಂತೋಷಪಟ್ಟರು. ಸರ್ವಭಕ್ಷಣದ ಪಾಪರಹಿತನಾಗಿ ಅಗ್ನಿಯೂ ಖುಷಿಪಟ್ಟ.

ಅಗ್ನಿಯ ಸತ್ಯನಿಷ್ಠೆಯನ್ನು ನಾವಿಲ್ಲಿ ಗಮನಿಸಬೇಕು. ಸಾಕ್ಷಿಯಾದವರು ಸುಳ್ಳು ಹೇಳುವುದು, ಏನನ್ನೂ ಹೇಳದೆ ಮೌನವಹಿಸುವುದು ಎಂತಹ ಅಪರಾಧ! ಎಂದು ಅಗ್ನಿಯ ಮಾತಿನಿಂದ ನಾವು ತಿಳಿಯಬಹುದಾಗಿದೆ. ಇಂದಿನ ವಾತಾವರಣದಲ್ಲಿ ಹಣ ಆಮಿಷಗಳಿಗೆ ಒಳಗಾಗಿ ಸುಳ್ಳು ಸಾಕ್ಷಿಗಳನ್ನು ಹೇಳುವವರನ್ನು ಕಾಣುತ್ತೇವೆ. ಸುಳ್ಳು ಹೇಳುವುದು ಮಾತ್ರವಲ್ಲದೆ ಸತ್ಯ ಹೇಳದಿರುವುದೂ ಅಪರಾಧವೇ ಆಗಿದೆ.

ಸರ್ವಭಕ್ಷನಾಗೆಂಬ ಭೃಗುಋಷಿಗಳ ಶಾಪದಿಂದ ಅಗ್ನಿಗಾದ ಕಳವಳವನ್ನು ನಾವು ಗಮನಿಸಬೇಕು. ನಾವು ಬ್ರಾಹ್ಮಣರಾಗಿದ್ದೂ ನಿರ್ಭಯರಾಗಿ ಜಿಹ್ವಾಚಾಪಲ್ಯಕ್ಕೆ ಒಳಗಾಗಿ ಸರ್ವಭಕ್ಷರಾಗಿದ್ದೇವೆ. ಅದರ ಬಗ್ಗೆ ನಮಗೆ ಸಂಕೋಚ ಕಳವಳಗಳಾವುದೂ ಉಂಟಾಗುತ್ತಿಲ್ಲ. ಮಾಂಸಭಕ್ಷಣ ಮದ್ಯಪಾನಗಳಿಗೂ ಅಳುಕಿಲ್ಲದೆ ಭಾಗಿಯಾಗುತ್ತಿದ್ದೇವೆ. ಅದು ನವನಾಗರಿಕತೆ ಎಂಬ ಅವಿವೇಕದ ಹಮ್ಮು ಬೇರೆ. ಸರ್ವಭಕ್ಷನಾಗಲು ಸಂಕೋಚಪಟ್ಟ ಅಗ್ನಿಯೇ ವಾಗಭಿಮಾನಿಯಾಗಿ ನಮ್ಮ ನಾಲಿಗೆಯಲ್ಲಿರುವಾಗ ಅದೇ ನಾಲಿಗೆಯಿಂದ ನಾವು ತಿನ್ನಬಾರದ್ದನ್ನೆಲ್ಲ ತಿಂದರೆ ಹೇಗೆ?

(40ನೇ...ಪುಟಕ್ಕೆ)

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.

ಅವಲೋಕನ

# ವೈಷ್ಣವ ದ್ವೇಷ ಮತ್ತು ಅದರ ಪರಿಹಾರ

-ಸಗ್ರಿ ರಾಘವೇಂದ್ರ ಉಪಾಧ್ಯಾಯ

ಭಗವಂತ ತುಂಬ ಭಕ್ತ ವತ್ಸಲ. ಮಹಾಭಾರತ (ಐ.ಉ.ಭಾ.2-7-4-3) ಅವನ ಭಕ್ತವಾತ್ಸಲ್ಯಾತಿಶಯವನ್ನು ಹೀಗೆ ಹೊಗಳುತ್ತಿದೆ.

**ತದ್ಭಕ್ತಭಕ್ತೇಷ್ವಪಿ ಯೋ ನ ಕುರ್ಯಾದ್ ಪ್ರೀತಿಮಂಜಸಾ ।**
**ವಿಷ್ಣುರ್ಜಹಾತಿ ತಂ ಪಾಪಮಿಹ ಚಾಮುತ್ರ ಚ ಪ್ರಭುಃ ॥**

ಯಾರು ಭಗವಂತನ ಭಕ್ತನಲ್ಲಷ್ಟೇ ಅಲ್ಲ, ಭಕ್ತನ ಭಕ್ತನಲ್ಲೂ ಚೆನ್ನಾಗಿ ಪ್ರೀತಿ ತೋರಿಸಲಾರನೋ, ಅಂತಹ ವೈಷ್ಣವದ್ವೇಷಿಯಾದ ಪಾಪಿಯನ್ನು ಭಗವಂತನು ಐಹಿಕವಾಗಿಯೂ, ಪಾರತ್ರಿಕವಾಗಿಯೂ ಕೈ ಬಿಡುವನು. ಸಂಧಾನಕ್ಕಾಗಿ ಹಸ್ತಿನಾಪುರಕ್ಕೆ ಹೋದ ಕೃಷ್ಣ ಭೀಷ್ಮಾದಿಗಳಿಂದ ತಮ್ಮ ಮನೆಗೆ ಬರುವಂತೆ ಪ್ರಾರ್ಥಿಸಲ್ಪಟ್ಟರೂ '**......ಜಗಾಮ ನೈಷಾಂ ಗೃಹಮಾದಿದೇವಃ । ಉಪೇಕ್ಷಿತಾ ದ್ರೌಪದೀತಿ....**' ಎಂದು ಶ್ರೀಮದ್ವರು ನಿರ್ಣಯಿಸಿರುವಂತೆ (ಮ.ಭಾರ.ತಾ.ನಿ. 24-67, 68) ಅವರೆಲ್ಲ ಭಕ್ತೋತ್ತಮಳಾದ ದ್ರೌಪದಿಯ ವಸ್ತ್ರಾಪಹರಣದ ಕಾಲದಲ್ಲಿ ಆಕೆಗೆ ನ್ಯಾಯ ಒದಗಿಸಿಕೊಡುವಲ್ಲಿ ಉಪೇಕ್ಷೆ ತಾಳಿ ಅಪಚಾರ ಎಸಗಿರುವರೆಂಬ ದೃಷ್ಟಿಯಿಂದ ಅವರ ಯಾರ ಮನೆಗೂ ಹೋಗದೆ ವೈಷ್ಣವರಿಗೆ ಸಹಾಯ ಮಾಡದೆ ಅವರ ದ್ವೇಷ ಎಸಗಿದಲ್ಲಿ ಅಂತಹ ವೈಷ್ಣವ ದ್ವೇಷಿಗಳನ್ನು ತಾನು ಹೇಗೆ ಐಹಿಕವಾಗಿ ಕೈ ಬಿಡುವೆನೆಂದು ತೋರಿಸಿಕೊಟ್ಟಿರುವನು.

ಹೀಗೆ ಭಗವಂತ ಇಷ್ಟೊಂದು ಭಕ್ತವತ್ಸಲನಾಗಿರುವುದರಿಂದಲೇ ಅಂತಹ ಭಕ್ತರ ವಿರುದ್ಧ ಎಸಗಲ್ಪಟ್ಟ ದ್ವೇಷ ಅರ್ಥಾತ್ ವೈಷ್ಣವದ್ವೇಷ ತುಂಬ ಪಾಪಪ್ರದವಾದುವೆಂದು ಶಾಸ್ತ್ರದಲ್ಲಿ ಪರಿಗಣಿತವಾಗಿದೆ. ಇಂತಹ ವೈಷ್ಣವದ್ವೇಷದ ಪರಿಹಾರೋಪಾಯವನ್ನು ಪರಿಶೀಲಿಸುವ ಮುನ್ನ ವೈಷ್ಣವದ್ವೇಷದ ವ್ಯಾಪ್ತಿಯಲ್ಲಿ ಯಾವ ಯಾವ ಅಪರಾಧಗಳು ಸೇರಿಕೊಳ್ಳುವವು ಎಂಬುದನ್ನು ಚಿಂತಿಸಬೇಕು.

1) ವೈಷ್ಣವರನ್ನು, ವಿಷ್ಣುಭಕ್ತರನ್ನು ಎದುರೆದುರಿಗೇ ಬೈಯುವುದು, ಅವಮಾನಿಸುವುದು, ಮನನೋಯಿಸುವುದು.

2) ವಿಷ್ಣುಭಕ್ತರ ಆಚರಣೆಗಳನ್ನು, ವಿಚಾರಧಾರೆಯನ್ನು, ಸಂಪ್ರದಾಯವನ್ನು ಹೀಗಳೆಯುವುದು,

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ಟೀಕಿಸುವುದು.

3) ಯಾವುದೋ ಪೂರ್ವಾಗ್ರಹಕ್ಕೊಳಗಾಗಿ ವೈಷ್ಣವರ ವ್ಯಕ್ತಿತ್ವಕ್ಕೆ, ಅವರ ಕೊಡುಗೆಗಳಿಗೆ, ಸಾಧನೆಗಳಿಗೆ ಮಾನ್ಯತೆಯನ್ನು ನೀಡದಿರುವುದು.

4) ಯಾವುದೋ ಲೌಕಿಕ ಕಾರಣಕ್ಕಾಗಿ ವೈಷ್ಣವರ ಸಂಪರ್ಕವನ್ನೇ ಕಡಿದುಕೊಂಡು **'ಭಾಂಧವಾಃ ವಿಷ್ಣುಭಕ್ತಾಶ್ಚ....'** ಎಂಬ ಆದರ್ಶಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು.

5) **'ಯದ್ಯಧರ್ಮಃ ಕೃತಃ ಸದ್ಭಿಃ ಸ ನ ವಾಚ್ಯಃ ಕಥಂಚನ'**– ಸಜ್ಜನರು ಅರ್ಥಾತ್ ವಿಷ್ಣುಭಕ್ತರು ಒಂದೊಮ್ಮೆ ಏನನ್ನಾದರೂ ಚಿಕ್ಕ ಪುಟ್ಟ ಅಧರ್ಮವನ್ನೆಸಗಿದರೆ ಅದನ್ನು ಡಂಗುರ ಹೊಡೆದು ಸಾರುವ ಚಾಪಲ್ಯಕ್ಕೆ ಒಳಗಾಗಬಾರದೆಂದು ವ್ಯಾಸಸ್ಮೃತಿ (ಭಾಗ. ತಾ. ನಿ. 1–17–21) ಎಚ್ಚರಿಸಿದ್ದರೂ ಇದಕ್ಕೆ ವ್ಯತಿರಿಕ್ತವಾಗಿ ವಿಷ್ಣುಭಕ್ತರು ಅಕಸ್ಮಾತ್ತಾಗಿ ಎಸಗಿದ ಅಧರ್ಮವನ್ನೂ ತುಂಬ ತಾತ್ಪರ್ಯಪೂರ್ವಕವಾಗಿ ಘೋಷಿಸುವುದು.

6) ವಿಷ್ಣುಭಕ್ತರನ್ನು ಯಾರಾದರೂ ತೆಗಳಿದರೆ ಟೀಕಿಸಿದರೆ ಅದನ್ನು ಪ್ರತಿಭಟಿಸದೆ 'ಮೌನಂ ಸಮ್ಮತಿ ಲಕ್ಷಣಮ್'–ಎಂಬಂತೆ ಸುಮ್ಮನಿದ್ದು ಬಿಡುವುದು.

ಹೀಗೆ ಉಲ್ಲೇಖಿಸಲ್ಪಟ್ಟ ಈ ಆರು ವೈಷ್ಣವ ದ್ವೇಷಗಳಲ್ಲಿ ಯಾವುದಾದರೂ ದ್ವೇಷ ನಮ್ಮಿಂದಲೂ ಎಸಗಲ್ಪಟ್ಟೇ ತೀರುವುದು. ಹೀಗೆ ನಮ್ಮಿಂದ ಎಸಗಲ್ಪಟ್ಟಿರಬಹುದಾದ ದ್ವೇಷವನ್ನು ವಿವೇಚಿಸಿಕೊಂಡು ಹಾಗೆ ಆಗಬಾರದಿತ್ತು ಎಂದು ಅದರ ವಿಷಯದಲ್ಲಿ ಪಶ್ಚಾತ್ತಾಪಡಬೇಕು. ಬಳಿಕ ಪ್ರಾಯಶ್ಚಿತ್ತವನ್ನು ಆಚರಿಸಬೇಕು.

## ವಿಷ್ಣುವಿನ ಜ್ಞಾನವೇ ಪ್ರಾಯಶ್ಚಿತ್ತ

ವೈಷ್ಣವ ದ್ವೇಷಪರಿಹಾರಕವಾದ ಪ್ರಾಯಶ್ಚಿತ್ತವಾದರೂ ಯಾವುದು? ಶ್ರೀ ಮಧ್ವಗುರುಗಳು ಈ ಬಗ್ಗೆ ಬೆಳಕು ಚೆಲ್ಲಿರುವರು– ವಿಷ್ಣುಭಕ್ತರಾದ ಪಾಂಡವರಿಗೆ ಅವರ ಪಾಲಿನ ರಾಜ್ಯದ ಭಾಗವನ್ನು ಕೊಡದಿದ್ದರೆ ಧರ್ಮವನ್ನು ಉಲ್ಲಂಘಿಸಿದಂತಾಗುವುದೆಂದು ವಿದುರ ಧೃತರಾಷ್ಟ್ರನಿಗೆ ಎಚ್ಚರಿಸಿದರೂ ವಿದುರನ ಎಚ್ಚರಿಕೆಗೆ ಧೃತರಾಷ್ಟ್ರ ಬೆಲೆಕೊಟ್ಟಿಲ್ಲ. ಇದರಿಂದಾಗಿ ವಿಷ್ಣುಭಕ್ತರಾದ ಪಾಂಡವರಿಗೆ ಅನ್ಯಾಯ ಎಸಗಿದಂತಾಗಿ ತನ್ನ ಪಾಲಿಗೆ ವೈಷ್ಣವದ್ವೇಷಪ್ರಯುಕ್ತ ಪಾಪಬರುವುದೆಂದೂ ಅವನಿಗೆ ತಿಳಿದಿತ್ತು. ಅದಕ್ಕಾಗಿಯೇ ಆ ವೈಷ್ಣವದ್ವೇಷಪ್ರಯುಕ್ತ ಪಾಪದ ಪರಿಹಾರಕ್ಕಾಗಿ ತತ್ವಜ್ಞಾನವನ್ನು ಪಡೆದುಕೊಳ್ಳಬೇಕು. ಭಗವಂತನ ಕುರಿತಾದ ಜ್ಞಾನವೇ ತತ್ವಜ್ಞಾನ ಎನಿಸಿದ್ದು, ತತ್ವಜ್ಞಾನಕ್ಕಾಗಿ ಭಗವಂತನ ಸ್ವರೂಪದ ಬಗ್ಗೆ ವಿಚಾರಿಸುವನು. ವಿದುರ ಸನಾತನರನ್ನು ಸ್ಮರಿಸಿಕೊಳ್ಳುವನು. ಸನಾತನರು ಬಂದು ಧೃತರಾಷ್ಟ್ರನಿಗೆ ವಿಷ್ಣುವಿನ

ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.

ಸ್ವರೂಪವನ್ನು ಉಪದೇಶಿಸುವರು. ಮಹಾಭಾರತದಲ್ಲಿ ಧೃತರಾಷ್ಟ್ರನಿಗೆ ಉಪದೇಶ ನೀಡಿದ ವಿದುರ 'ನಿನ್ನಿಂದ ಹೇಳಲ್ಪಡದ ಏನಾದರೂ ಪ್ರಮೇಯ ಇದ್ದರೆ ತಿಳಿಸು' (ಅನುಕ್ತಂ ಯದಿತೇ ಕಿಂಚಿದ್ ವಾಚಾ ವಿದುರ ವಿದ್ಯತೇ । ತನ್ಮೇ ಶುಶ್ರೂಷತೋ ಬ್ರೂಹಿಃ..........) ಎಂದು ವಿಚಾರಿಸಿದ ಧೃತರಾಷ್ಟ್ರನಿಗಾಗಿ ಸನತ್ಕುಮಾರ ಋಷಿ ಅತಿರಹಸ್ಯವಾದ ಪ್ರಮೇಯವನ್ನೂ ನಿನಗೆ ತಿಳಿಸುವನು. ಇದರಿಂದಾಗಿ ನೀನು ದೇವತೆಗಳ ದೃಷ್ಟಿಯಲ್ಲಿ ನಿಂದನೀಯ ಆಗಲಾರಿ– **'ನ ತೇನ ಗರ್ಹ್ಯೋ ದೇವಾನಾಂ.....'** ಎಂದು ತಿಳಿಸಿ ಸನತ್ಕುಮಾರನನ್ನು ಸ್ಮರಿಸಿಕೊಳ್ಳುವನೆಂದು ಅಸ್ಪಷ್ಟವಾಗಿ ಹೇಳಲಾಗಿದೆ. (ಮ.ಭಾರ. ಉದ್ಯೋಗ 41–1.....6) ಇದನ್ನು ಶ್ರೀಮಧ್ವರು ಹೀಗೆ ಸ್ಪಷ್ಟಪಡಿಸಿರುವರು.

**ತಸ್ಯ ಭಾವಮತೃತ್ವಾ ಸ ಜ್ಞಾನಾದಿಚ್ಛನ್ನಘಕ್ಷಯಮ್ ।**
**ವಿಷ್ಣೋಃ ಸ್ವರೂಪಂ ಪಪೃಚ್ಛ ಸೋಽಸ್ಮರಚ್ಚ ಸನಾತನಮ್ ।**

(ಮ,ಭಾರ,ತಾ.ನಿ.24–45)

ಸನಾತನರಾದರೂ ಶ್ರೀವಿಷ್ಣುವಿನ ಸ್ವರೂಪವನ್ನೇ ತಿಳಿಸುವರು– **'ಸ ಆಗತ್ಯಾವದತ್ ತತ್ವಂ ವಿಷ್ಣೋಃ........'**

ಹೀಗೆ ಪಾಂಡವರ ವಿಷಯದಲ್ಲಿ ಎಸಗಿದ ವೈಷ್ಣವದ್ವೇಷರೂಪವಾದ ಪಾಪದ ಪರಿಹಾರಕ್ಕಾಗಿ ಧೃತರಾಷ್ಟ್ರ ಸನಾತನರಿಂದ ಶ್ರೀವಿಷ್ಣುವಿನ ತತ್ವಜ್ಞಾನವನ್ನು ಪಡೆದುಕೊಂಡನೆಂದರೆ ವಿಷ್ಣುವಿನ ತತ್ವಜ್ಞಾನದಿಂದ ವೈಷ್ಣವದ್ವೇಷದ ಪಾಪ ಪರಿಹಾರವಾಗುವುದೆಂದು ಸಿದ್ಧವಾಗುವುದು.

## ವಿಷ್ಣುತತ್ವಜ್ಞಾನ ಹೇಗೆ ಪರಿಹಾರಕ?

ಶ್ರೀವಿಷ್ಣುವಿನ ತತ್ವಜ್ಞಾನದಿಂದ ವೈಷ್ಣವದ್ವೇಷದ ಪಾಪ ಹೇಗೆ ಪರಿಹಾರ ಆಗುವುದು? ವಿಷ್ಣುತತ್ವಜ್ಞಾನಕ್ಕೂ ವೈಷ್ಣವದ್ವೇಷಪರಿಹಾರಕ್ಕೂ ಏನು ಸಂಬಂಧ? ಎಂಬ ಸಂದೇಹ ಸಹಜ.

ವಿಷ್ಣುವಿನ ಭಕ್ತರ ಬಗ್ಗೆ ಎಸಗಿದ ವೈಷ್ಣವದ್ವೇಷ ಮುಖ್ಯವಾಗಿ ಶ್ರೀವಿಷ್ಣುವಿನ ಬಗ್ಗೆ ನಡೆಸಿದ ಅಪರಾಧ. ಭಕ್ತವತ್ಸಲನಾದ ಅವನು ತನ್ನ ಭಕ್ತರ ವಿರುದ್ಧ ಎಸಗುವ ಅಪರಾಧಗಳಿಗಾಗಿ ಅಸಮಾಧಾಪಟ್ಟುಕೊಳ್ಳುವನು. ಆದುದರಿಂದಲೇ ವೈಷ್ಣವದ್ವೇಷ ದೊಡ್ಡ ಪಾಪವಾಗಿ ಪರಿಗಣಿತವಾಗುವುದು. ಇಂತಹ ಪಾಪದ ಪರಿಹಾರಕ್ಕೆ ಭಗವಂತನನ್ನು ಸಂತೋಷಪಡಿಸಬೇಕು. ಅವನ ಗುಣೋತ್ಕರ್ಷವನ್ನು ಅರಿತರೆ ಅವನಿಗೆ ಆಗುವಷ್ಟು ಸಂತೋಷ ಇನ್ನಾವುದರಿಂದಲೂ ಆಗಲಾರದು. **'ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋಃ ಗುಣೋತ್ಕರ್ಷಜ್ಞಾತಂ ಯಾದೃಶೀ ಸ್ಯಾತ್........'**. ಅವನ ಗುಣೋತ್ಕರ್ಷ ಜ್ಞಾನ ಎಂದರೆ ಅವನ ಸ್ವರೂಪಜ್ಞಾನ ಎಂದೇ

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.



ಮುಂದುವರಿಯುತ್ತದೆ.....

ಅರ್ಥ. ಆದುದರಿಂದ ಅವನ ಗುಣೋತ್ಕರ್ಷರೂಪವಾದ ಸ್ವರೂಪಜ್ಞಾನವನ್ನು ಪಡೆದುಕೊಂಡು ಅದರಿಂದ ಪ್ರಸನ್ನನಾಗುವ ಅವನು ತನ್ನ ಭಕ್ತರಾದ ವೈಷ್ಣವರ ವಿರುದ್ಧ ಎಸಗಿದ ಅಪರಾಧದ ಬಗ್ಗೆ ತಾಳಿದ ಅಸಮಾಧಾನವನ್ನು ದೂರಮಾಡುವಂತೆ ಅಥವಾ ಕಡಿಮೆ ಮಾಡುವಂತೆ ಮಾಡುವಂತಾಗುವುದು.

ಈ ಅಭಿಪ್ರಾಯದಿಂದ ವೈಷ್ಣವ ದ್ವೇಷದ ಪಾಪಪರಿಹಾರಕ್ಕಾಗಿ ಶ್ರೀವಿಷ್ಣುವಿನ ಸ್ವರೂಪ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಸೂಚನೆಯನ್ನು ಶ್ರೀಮಧ್ವರು ಧೃತರಾಷ್ಟ್ರನ ನಡತೆಯ ಹಿನ್ನೆಲೆಯಲ್ಲಿ ಸೂಚಿಸಿರುವರು.

## ಭಕ್ತವಾತ್ಸಲ್ಯದ ಮುಖಕ್ಕೆ ಒತ್ತು

ಆದ್ದರಿಂದ ನಾವು ಕೂಡಾ ವೈಷ್ಣವದ್ವೇಷಪ್ರಯುಕ್ತ ಪಾಪದ ಪರಿಹಾರಕ್ಕಾಗಿ ಭಗವಂತನ ಸ್ವರೂಪದ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳೋಣ. ಭಗವಂತನ ಸ್ವರೂಪದಲ್ಲೂ ಅವನ ಭಕ್ತವಾತ್ಸಲ್ಯದ ಬಗ್ಗೆ ಹೆಚ್ಚು ಗಮನ ಹರಿಸೋಣ. ತನ್ನ ಭಕ್ತರಲ್ಲಿ ಭಕ್ತಿಜ್ಞಾನಾದಿಗಳು ಉಂಟಾಗುವಂತೆ ಮಾಡುವವನೂ ಅವನೇ. ಭಕ್ತರ ಅಂತಹ ಭಕ್ತಿ ಜ್ಞಾನಾದಿಗಳಿಗಾಗಿ ಒಲಿದು ಅವರ ಬಗ್ಗೆ ತುಂಬ ವಾತ್ಸಲ್ಯವನ್ನೂ ತೋರುವ ಸೌಜನ್ಯ ಅವನದ್ದು. ಯಾವ ಯಾವ ಭಕ್ತರ ಬಗ್ಗೆ ಹೇಗೆ ಹೇಗೆ ವಾತ್ಸಲ್ಯವನ್ನು ಅನುಗ್ರಹಿಸಿದ್ದಾನೆಂದು ಪರಿಶೀಲಿಸುವ ಮೂಲಕ ಅವನ ಸ್ವರೂಪಜ್ಞಾನವನ್ನು ಹೆಚ್ಚಿಸಿಕೊಳ್ಳೋಣ. ಇದರಿಂದ ಸುಪ್ರೀತನಾದ ಅವನು ನಮ್ಮ ವೈಷ್ಣವದ್ವೇಷದ ಪಾಪವನ್ನೂ ದೂರಮಾಡಿಯಾನು, ಇಲ್ಲವೇ ಕಡಿಮೆಯಾದರೂ ಮಾಡಿಯಾನು.

★

(11ನೇ...ಪುಟದಿಂದ)

## ಕೃಷ್ಣ ರಕ್ಷಿಸು ನಮ್ಮನನವರತ

ಕೃಷ್ಣ, ನೀನು ನಮ್ಮ ಶರೀರದೊಳಗೇ ಇರುವಿ. ಹೊರಗೆ ಅರಸಿ ಹೋಗಬೇಕಾಗಿಲ್ಲ. ಒಳಗೆ ನೀನು ಇಲ್ಲದವನಿಗೆ ನೀನು ಹೊರಗೂ ಇರುವುದಿಲ್ಲ. ಹಿರಣ್ಯಕಶಿಪು ನಿನ್ನನ್ನು ಕೊಲ್ಲಬೇಕೆಂದು ಅರಸಿದ. ಹೊರಗೆ ಊರೆಲ್ಲ ಸುತ್ತಿದ. ಆದರೇನು? ನೀನು ನಿನ್ನ ಪರಮಧಾಮವಾದ ವೈಕುಂಠದಲ್ಲಿಯೂ ಅವನಿಗೆ ಸಿಗಲಿಲ್ಲ. ಅವನ ಶರೀರದೊಳಗೇ ನೀನು ನಿಂತಿದ್ದೆ. ನಾವು ಹಿರಣ್ಯಕಶಿಪುವಿನಂತಾಗಬಾರದು. ಪ್ರಹ್ಲಾದನಂತಾಗಬೇಕು. ಒಳಗೆ ಹೊರಗೆ ಎಲ್ಲೆಡೆ ನಿನ್ನ ಸನ್ನಿಧಾನವನ್ನು ಕಂಡು ಅನುಭವಿಸುವಂತಾಗಬೇಕು. ಹಾಗೆ ಮಾಡಿ ನಮ್ಮನ್ನು ಸದಾ ಕಾಪಾಡು.

(ಮುಂದಿವರಿಯುವುದು)

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಯಮನು ನಚಿಕೇತನಿಗಾಗಿ ಮತ್ತೊಂದು ಬಲೆ ಬೀಸಿದ. ವಿಶಾಲ ಪ್ರಪಂಚಕ್ಕೆ ರಾಜನಾಗುವ ಕನಸು. ಇದು ಭಾರೀ ಕ್ರಿಯಾಶಾಲಿಗಳ ಅಂತಿಮ ಹೆಗ್ಗುರಿ ಹೆಬ್ಬಯಕೆ ಆಗಿರುತ್ತದೆ. ಒಂದು ಮಂಡಲ ಪಂಚಾಯತಿಗಳಿಗೆ ಅಧಿಕಾರ ಹೊಂದಲೇ ಏನೆಲ್ಲಾ ಮಾಡುವ ಜನ M.L.A, M.P. ಮಂತ್ರಿಗಳಾಗಲೂ ಎಷ್ಟೆಲ್ಲಾ ಹಣ ಸುರಿಯುತ್ತಾರೆ. ಹಿಂಬಾಲಕರನ್ನೆಲ್ಲಾ ಸಾಕುತ್ತಾರೆ. ಸುಳ್ಳನ್ನೆಲ್ಲಾ ಹೇಳುತ್ತಾರೆ. ಆಡಂಬರದ ಡಂಗುರ ಸಾರುತ್ತಾರೆ. ಇದೆಲ್ಲಾ ತಮ್ಮ ಭೂಮಿಯ ಕ್ಷೇತ್ರದ ಒಡೆಯರಾಗಲು ತಾನೇ?

ಆ ಭೂಮಿಯ ಒಡೆತನ ಸಿಕ್ಕರೂ ಸಾಕು, ಕಟ್ಟಡದಿಂದ ಹಿಡಿದು ಕಂಡದ್ದಕ್ಕೆಲ್ಲಾ ಹಿಡಿತ ಸಾಧಿಸಬಹುದು. ಎಲ್ಲೆಡೆಯೂ ಗೌರವ ಎಲ್ಲಾ ಕಡೆಯಿಂದಲೂ ಹಣ ಹರಿಯುತ್ತದೆ ಎಂದೇ ಅಲ್ಲವೆ? ಅದನ್ನೂ ನೀಡುವೆ ನಿನಗೆ ಎನ್ನುತ್ತಾನೆ ನಚಿಕೇತ.

ಶಾಲಾ ಬಾಲಕರ ಚರ್ಚಾಕೂಟಗಳನ್ನು ಗಮನಿಸಿ. ಅಲ್ಲಿಯ ವಿಷಯ ಒಂದೇ. ನಾನು ಪ್ರಧಾನಮಂತ್ರಿಯಾದರೆ ಏನು ಮಾಡುವೆ? ಮುಖ್ಯಮಂತ್ರಿಯಾದರೆ ಏನು ಮಾಡುವೆ? ಎಂದು. ಅಂದರೆ ಅಧಿಕಾರವಿರುವಾಗ ಬದಲಾವಣೆ ಸಾಧ್ಯ ಎಂಬ ಕನಸು ಮಕ್ಕಳದ್ದು. ಇದು ಸತ್ಯವೂ ಸಹ. ಹಾಗೆಯೇ ಅಧಿಕಾರವಿದ್ದರೆ ಭೋಗಸಾಧ್ಯ ಎಂಬ ರಾಜಕಾರಣಿಗಳ ಒಳ ಇಂಗಿತ ಬಾಲಕರಿಗೆ ಅರಿವಿರುವುದಿಲ್ಲ. ಅಂತೂ ಯಮನ ಈ ಜಾಲ ಎಂತಹ ಘಟಾನುಘಟಿಯನ್ನು ಇಡೀ ಬದುಕಿನವರೆಗೂ ಸಿಕ್ಕಿಸುವುದರಲ್ಲಿ ಸಂದೇಹವಿಲ್ಲ.

ಇಷ್ಟೇ ಏಕೆ ನೀನು ಬಯಸಿದುದನ್ನೆಲ್ಲಾ ಕೈಗೂಡುವಂತೆ ಮಾಡುವೆ, ಸರಿ ತಾನೇ! ಎನ್ನುತ್ತಿದ್ದಾನೆ ಯಮ. ಪ್ರಾಯಶಃ ಕೊಡಲು ಇಷ್ಟು ಪ್ರಯತ್ನ ಮಾಡಿದವರು ಸಹ ಯಾರೂ ಇಲ್ಲ. ಬೇಡ ಎಂದು ಪ್ರತಿ ಬಾರಿಗೂ ಪ್ರತಿಭಟಿಸುವವರೂ ಯಾರೂ ಇಲ್ಲ. ಅದು ಇದ್ದರೆ ನಚಿಕೇತ ಮಾತ್ರ.

**ಯೇ ಯೇ ಕಾಮಾಃ ದುರ್ಲಭಾಃ ಮರ್ತ್ಯಲೋಕೇ**
**ಸರ್ವಾನ್ ಕಾಮಾನ್ ಛಂದತಃ ಪ್ರಾರ್ಥಯಸ್ವ**
**ಇಮಾ ರಾಮಾಃ ಸರಥಾಃ ಸತೂರ್ಯಾಃ**

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

**ನ ಹೀದೃಶಾ ಲಂಭನೀಯಾ ಮನುಷ್ಯೈಃ**
**ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ**
**ನಚಿಕೇತೋ ಮರಣಂ ಮಾನುಪ್ರಾಕ್ಷೀಃ**

ಮಾನವರ ಲೋಕದಲ್ಲಿ ಏನೇನು ದುರ್ಲಭವೋ ಅದನ್ನೆಲ್ಲವನ್ನು ಮನಬಂದಂತೆ ಕೇಳು, ಈ ಕಣ್ಸೆಳೆವ ಹೆಂಗಳೆಯರು, ಅವರನ್ನು ಹೊತ್ತ ಬೆಡಗಿನ ವಾಹನಗಳು, ಅವರ ಮೈಮಾಟಗಳಿಗೆ ಕಲೆ ತುಂಬಿಸುವ ವಾದ್ಯಗಳು ಎಲ್ಲವನ್ನೂ ಕೇಳು. ಇವು ಮನುಷ್ಯರಿಗೆ ಸುಲಭದಲ್ಲಿ ಲಭಿಸುವವು ಅಲ್ಲ. ನಾನು ಇವನ್ನೆಲ್ಲಾ ನೀಡುವೆ. ಅವುಗಳ ಸೇವೆಯ ಸುಖ–ಗತ್ತು ಗಮತ್ತು ಎಲ್ಲಾ ಅನುಭವಿಸು ಆದರೆ ಮುಕ್ತನಿಯಾಮಕ ಭಗವಂತ ಬಗೆಗೆ ಮಾತ್ರ ಕೇಳಬೇಡ!

ವಿತ್ತೇಷಣಾ ಪುತ್ರೇಷಣಾ ಲೋಕೇಷಣಾ ಎಂಬ ಮೂರು ಆಸೆಗಳಲ್ಲಿ ಪರಲೋಕದಂತೆ ಈ ಲೋಕದ ಹೆಗ್ಗಳಿಕೆ ಬಯಸುವುದೂ ಸೇರಿರುತ್ತದೆ. ಕೀರ್ತಿ ಒಂದು ಮುಖವಾದರೆ ಸುಖ ಇನ್ನೊಂದು ಮುಖ. ತಮ್ಮ ಸಣ್ಣ ಆಸೆ–ವಿಶ್ರಾಂತಿ–ಸ್ವಂತ ಸುಖವನ್ನು ದಶಕಗಳ ತನಕ ಬದಿಗೊತ್ತಿ ದುಡಿಯುವವರೂ ಇದ್ದಾರೆ. ಅದನ್ನೇ ನೀಡುವೆ ಎನ್ನುತ್ತಾನೆ ಯಮ !

ಇಲ್ಲಿ ಮರ್ತ್ಯಲೋಕ ಎಂದರೆ ಸಾಯುವವರ ಲೋಕ. ಸಾಯುವುದರ ಒಳಗೆ ಸುಖ ಅನುಭವಿಸಬೇಕೆಂದು ತವಕಿಸುವವರು. ಅದಕ್ಕಾಗಿ ಏನೆಲ್ಲಾ ಸಾಹಸಮಾಡಿ ಸೋಲುವವರು–ಒಮ್ಮೆ ಗೆದ್ದರು ಎನ್ನುಕೊಳ್ಳುವಾಗಲೇ ದೇಹ ಹೂತು ಹೋಗಿ ಗೆದ್ದಲು ಹುಳು ಹಿಡಿದಿರುತ್ತದೆ. ಇಂತವರ ಸ್ಪರ್ಧಾಲೋಕ ಭೂಲೋಕ. ಇಲ್ಲಿ ವಿಜಯಿಯಾಗಿಸುವೆ ಎನ್ನುತ್ತಿದ್ದಾನೆ ಯಮ.

ಮಾನವನ ಎಲ್ಲಾ ಸುಖಗಳ ಅಂತಿಮ ಗುರಿ ಏನು? ಸಂಪಾದನೆ. ಆ ಸಂಪಾದನೆಯ ನಂತರ ಸುಖ–ಅಂದರೆ ಬಟ್ಟೆ–ಬರೆ–ಬಂಗಲೆ–ಭೂಮಿ–ಬಂಧು ಇಷ್ಟೇ ಏನು? ಬದುಕಿನಲ್ಲಿ ಬೆಡಗಿಯಾದ ಒಬ್ಬಳು ಸಂಗಾತಿಯಾಗಿ ಬಂದು ಜೀವನ ಪರ್ಯಂತ ಇರುವುದು. ಅಲ್ಲಿಗೆ ಅವನ ಸಾಹಸ ಮುಗಿಯದು. ಆ ಬೆಡಗಿಯ ಕೈ ಹಿಡಿದವ ನಾನು ಎಂದು ತೋರಿಸುವ ಬಯಕೆ. ಹೀಗಾಗಿ ಅವಳೊಂದಿಗೆ ತಿರುಗಾಡಲು ಕಾರು. ಕಾರಿನಲ್ಲಿ ಆಕೆ ಒರಗಲಿ, ಮಲಗಲಿ, ವಿಶ್ರಮಿಸಲಿ ಎಂದು ಇವನೇ ಕಾರನ್ನು ಓಡಿಸುವುದು. ಕಾರು ಮುಂದೆ ಓಡಿಸುತ್ತಾನೆ ಮನಸ್ಸನ್ನು ಇವಳ ಹಿಂದೆ ಬಿಟ್ಟಿರುತ್ತಾನೆ. ಹೀಗಾಗಿ ಸ್ವಂತ ಕಾರಿಗೆ ಒಬ್ಬ ಚಾಲಕ ಇವಳಿಗೆ. . ಆದರೂ ತಿಳಿಯುತ್ತಾನೆ –ತನ್ನ ಪ್ರತಿಷ್ಠೆ ಹೆಚ್ಚುತ್ತಿದೆ ಎಂದು.

(ಮುಂದಿವರಿಯುವುದು)

**ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.**

ಸ್ತೋತ್ರ ಚಿಂತನೆ

ಭಾಗ–5

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

## ಗದೆಯಿಂದ ಜ್ಞಾನ ಹೇಗೆ?

ಅಜ್ಞಾನಕ್ಕೆ ಸಂಕೇತವಾಗಿ ಮೃತ್‌ಪಿಂಡವನ್ನು ಬಳಸಿಕೊಳ್ಳುತ್ತಾರೆ. ದಡ್ಡನಾದ ವಿದ್ಯಾರ್ಥಿಯನ್ನು ಗುರುಗಳು ನಿಂದಿಸುವ ಕ್ರಮವೇ ಹೀಗೆ "ಎಷ್ಟು ಹೇಳಿದರೂ ತಿಳಿಯದು! ತಲೆಯಲ್ಲಿ ಏನು ಮಣ್ಣು ತುಂಬಿದೆಯಾ?!" ಎಂದು. ಇಲ್ಲಿ ಮಣ್ಣು ಎಂದರೆ ಅಜ್ಞಾನ. ಅಜ್ಞಾನದ ಮಣ್ಣಿನ ಹೆಂಟೆಯನ್ನು ಕುಟ್ಟಲು ಬೇಕಾದದ್ದು ಗದೆ. ಗದೆಯಿಂದ ಹದವಾದ ಮಣ್ಣಿನಿಂದ ತತ್ವಜ್ಞಾನದ ಲತೆ ಹೊರಹೊಮ್ಮುತ್ತದೆ. ಬಹುತೇಕ ಹುಟ್ಟಿನಿಂದಲೇ ಜೀವರ ತಲೆಯಲ್ಲಿ ಅಜ್ಞಾನ ತುಂಬಿರುತ್ತದೆ. ಅಜ್ಞಾನದ ಪರಿಹಾರಕ್ಕಾಗಿ ಗದಾಪಾಣಿಯಾದ ಶ್ರೀಹರಿಯಲ್ಲಿ ಮೊರೆ ಹೊಕ್ಕಬೇಕು. ಆವಾಗ ನಮ್ಮೆಲ್ಲರ ಅಜ್ಞಾನವನ್ನು ಪರಿಹರಿಸುತ್ತಾನೆ. ಇದಕ್ಕೆ ಬೇಕಾದ ದೃಷ್ಟಾಂತವನ್ನು ಭಾಗವತವೇ ಮುಂದೆ ಹೇಳುತ್ತದೆ. ಭಾಗವತದಲ್ಲಿ ಬರುವ ಪರೀಕ್ಷಿತ ಎಂಬ ಶಬ್ದ ಅಂದಿನ ರಾಜನಿಗೆ ಮಾತ್ರ ಸೀಮಿತವಾದದ್ದಲ್ಲ. ಅವನು ನಮ್ಮೆಲ್ಲರ ಪ್ರತಿನಿಧಿ. ನಾವೂ ಪರೀಕ್ಷಿತರೇ. ಜಗತ್ತಿನ ಭೌತಿಕವಿಷಯಗಳ ಸುತ್ತ ನಮ್ಮ ಮನಸ್ಸು ಬುದ್ಧಿಗಳು ಚಕ್ರದಂತೆ ತಿರುಗುತ್ತವೆ. ಅವುಗಳನ್ನೇ ನೋಡುತ್ತಾ ಕಾಲಹರಣಮಾಡುತ್ತಿದ್ದೇವೆ. ಆದ್ದರಿಂದ ನಾವೂ ಪರೀಕ್ಷಿತರೇ. (**ಪರಿತಃ ಯ ಈಕ್ಷತಿ ಸ ಪರೀಕ್ಷಿತಃ**) ಆದರೆ ಆ ಪರೀಕ್ಷಿತನು ಗರ್ಭದಲ್ಲಿ ತಿರುಗಿ ತಿರುಗಿ ಕಂಡದ್ದು ಜಗತ್ತನ್ನಲ್ಲ. ಜಗದಂತರ್ಯಾಮಿಯನ್ನು. ಅದರಲ್ಲಿಯೂ ಗದಾಪಾಣಿಯಾಗಿ ತಿರುಗುವ ಹರಿಯನ್ನು.

**ಕ್ಷತಜಾಕ್ಷಂ ಗದಾಪಾಣಿಮಾತ್ಮನಃ ಸರ್ವತೋದಿಶಮ್ ।**
**ಪರಿಭ್ರಮಂತಮುಲ್ಕಾಭಾಂ ಭ್ರಾಮಯಂತಂ ಗದಾಂ ಮುಹುಃ ।**
**ಅಸ್ತ್ರತೇಜಃ ಸ್ವಗದಯಾ ನೀಹಾರಮಿವ ಗೋಪತಿಃ ।**
**ವಿಧಮಂತಂ ಸನ್ನಿಕರ್ಷೇ ಪರ್ಯೈಕ್ಷತ ಕ ಇತ್ಯಸೌ ॥**

(ಭಾ. 1–11–7)

ಗರ್ಭದಲ್ಲಿ ಕಂಡ ಗದಾಧರನ ದರ್ಶನವೇ ಪರೀಕ್ಷಿತನ ದುರಿತಧ್ವಂಸಕ್ಕೆ ಉಪಸಂಹಾರದಲ್ಲಿ ನಾಂದಿಯಾಯಿತು. ಸಪ್ತಾಹ ಶ್ರವಣದ ಭಾಗ್ಯ ಇಂದಿಗೂ ಜಗದಲ್ಲಿ ಝಗಝಗಿಸಿತು. ಶ್ರೀಹರಿಯ ಗದೆಯಲ್ಲಿ ಎಂಟು ಗಂಟುಗಳಿವೆ. ಮೂಜಗದ ಅಜ್ಞಾನದ ನಂಟನ್ನೇ ಕಿತ್ತೊಗೆವ ಅಂಟು ಅವುಗಳಿಗಿದೆ.

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

ಅಜ್ಞಾನವನ್ನು ಹರಣಮಾಡುವ ಸಾಮರ್ಥ್ಯಮಾತ್ರ ಗದಾಧರನದ್ದಲ್ಲ. ಅಜ್ಞಾನಾಭಿಮಾನಿಗಳನ್ನು ತರಿಯುವ ಸಾಮರ್ಥ್ಯವಿದೆ. ಹರಿಯ ಭಂಟನಾದ ಭೀಮಸೇನನು ಗದಾಪಾಣಿಯಾದದ್ದು ಇದಕ್ಕಾಗಿಯೇ. ಅಜ್ಞಾನಿಗಳೆಂಬ ಮೃತ್ಪಿಂಡಗಳನ್ನು ಸದೆಬಡಿಯಲು.

ಈ ವಚನಗಳಿಗೆ ವಾದಿರಾಜ ಗುರುಸಾರ್ವಭೌಮರ ತೀರ್ಥಪ್ರಬಂಧದಲ್ಲಿನ ಕುರುಕ್ಷೇತ್ರದ ವರ್ಣನೆ ಬಹಳ ಅರ್ಥಪೂರ್ಣವಾಗಿ ಹೊಂದುಕೊಳ್ಳುತ್ತದೆ.

**ಶ್ರೀಭೀಮಸೇನಕರಕಂಜಗದಾಪ್ರಹಾರೈಃ**
**ಚೂರ್ಣೀಕೃತಾಶ್ವಗಜಪತ್ತಿ ಮೃದುಗ್ರಪಿಂಡಮ್ ।**
**ಉತ್ಪಾತಪಾರ್ಥಶರಸಸ್ಯಪದಂ ಕುರೂಣಾಂ**
**ಕ್ಷೇತ್ರಂ ದಿಶಾಸು ವಿತತಾನ ಸುಕೀರ್ತಿಧಾನ್ಯಮ್ ॥**

ರೈತರು ನೆಲವನ್ನು ನೇಗಿಲಿನಿಂದ ಚೆನ್ನಾಗಿ ಉತ್ತು, ಉಳುವಾಗ ಮೇಲೆ ಎದ್ದಿರುವ ಗಟ್ಟಿ0ಯಾದ ಮಣ್ಣಿನ ಹೆಂಟೆಗಳನ್ನು, ಹೆಂಟೆ ಕೊಡತಿಯಿಂದ (ಬಡಿಗೆಯಿಂದ) ಹೊಡೆದು ಪುಡಿಮಾಡಿ, ನೆಲಸಮ ಮಾಡಿ ಸಸ್ಯವನ್ನು ಚೆನ್ನಾಗಿ ನೆಟ್ಟು ಬಹಳ ಧಾನ್ಯವನ್ನು ಬೆಳೆಸಿ, ಉಂಡು ಸುಖಿಸುವಂತೆ, ಭೀಮಸೇನದೇವರು ತಮ್ಮ ಹಸ್ತಕಮಲದಲ್ಲಿರುವ ಗದೆ0ಯ ಹೊಡೆತಗಳಿಂದ ಕುದುರೆ, ಆನೆ, ಕಾಲಾಳುಗಳೆಂಬ ಮಣ್ಣಿನ ಗಟ್ಟಿಯಾದ ಹೆಂಟೆಗಳನ್ನು ಪುಡಿಮಾಡಿ, ಅರ್ಜುನನ ಬಾಣಗಳೆಂಬ ಸಸ್ಯಗಳನ್ನು ನೆಡುವುದಕ್ಕೆ ಅವಕಾಶ ಕಲ್ಪಿಸಿ ದಿಕ್ಕು ದಿಕ್ಕುಗಳಲ್ಲಿಯೂ ಕೀರ್ತಿಯೆಂಬ ಧಾನ್ಯವನ್ನು ಹರಡಿದರು ಎಂದು ಭಾವ.

## ಬಾಣಕ್ಕೆ ಅಜ್ಞಾನದ ಸಂಬಂಧ

ಹಿಂದೆ ಹೇಳಿದ ಆಯುಧಗಳ ಪಟ್ಟಿಯಲ್ಲಿ ಈ ಬಾಣವೆಂಬ ಆಯುಧದ ಸ್ಥಾನ ವಿಲಕ್ಷಣವಾದುದು. ಹಿಂದೆ ಹೇಳಿದ ಆಯುಧಗಳೆಲ್ಲವೂ ಕೈಯಲ್ಲಿ ಸ್ಥಿರವಾಗಿದ್ದು ಗುಣರೂಪವಾಗಿದ್ದರೆ, ಈ ಬಾಣವು ಸ್ಥಿರವೂ ಆಗಿದೆ ಅಸ್ಥಿರವೂ ಆಗಿದೆ. ಕೈಯಲ್ಲಿರುವ ತನಕ ಸ್ಥಿರ, ಬಿಟ್ಟ ಬಳಿಕ ಅಸ್ಥಿರ. ಬಿಟ್ಟಬಾಣ ತಿರುಗಿ ಬರಲೇಬೇಕೆಂಬ ನಿಯಮ ಚಕ್ರದಂತೆ ಇಲ್ಲ. ಅಜ್ಞಾನಿಗಳಿಗಾಗಿಯೇ ಪ್ರಯೋಗಿಸಲ್ಪಡುವ ಆಯುಧ ಬಾಣವಾದುದರಿಂದ ಅಜ್ಞಾನಕ್ಕೂ ಜ್ಞಾನಕ್ಕೂ ಸಂಬಂಧ ಚೆನ್ನಾಗಿದೆ. ಬಾಣಕ್ಕೆ ಅಜ್ಞಾನ ಕೊಡುವ ಸಾಮರ್ಥ್ಯವೂ ಇದೆ. ಮಾರೀಚನಿಗೆ ಶ್ರೀರಾಮ ಬಿಟ್ಟ ಬಾಣ ಮಾರೀಚನ ಅಂತ್ಯಕಾಲದ ನೈಚ್ಯಕ್ಕೂ ಕಾರಣವಾಯಿತು.

"**ಅಭಕ್ತ್ಯಾ ಉದಾಹೃತಂ ನಾಮ ನೈವ ಫಲದಾತೃ ಭವಿಷ್ಯತಿ**" ಎಂಬ ಮಾತಿಗೆ ದೃಷ್ಟಾಂತವೂ ಆಯಿತು. ಹಿಂದೊಮ್ಮೆ ರಾಮನ ಬಾಣ ಸ್ಪರ್ಶವಾಗಿದ್ದರೂ ಮಾರೀಚ ತನ್ನ ಅಂತ್ಯಕಾಲದಲ್ಲಿ ರಾಮನ ಮತ್ತೊಂದು ಬಾಣ ತಾಗಿದಾಗ ರಾಮನಂತೆ ಸ್ವರ ಬದಲಿಸಿ ಹೇ ಸೀತಾ! ಹಾ ಲಕ್ಷ್ಮಣ! ಎಂದು ವಿಪರೀತಭ್ರಮೆ ಹುಟ್ಟಿಸಲು ಪ್ರಯತ್ನಿಸಿ ಸತ್ತಿದ್ದಾನೆ. ಇಲ್ಲಿ ಗಮನಿಸ ಬೇಕಾದದ್ದು

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**

ಶ್ರೀರಾಮನು ಮಾರೀಚನಿಗೆ ಅಜ್ಞಾನಕೊಡಲೋಸುಗವೇ ಎರಡನೇ ಬಾಣವನ್ನು ಹೂಡಿದ್ದಾನೆ. ಹೀಗೆಂದ ಮಾತ್ರಕ್ಕೆ ರಾಮನ ಬಾಣ ಅಜ್ಞಾನವನ್ನೇ ಕೊಡುತ್ತದೆ ಎಂದು ನಿಯಮವೇನಿಲ್ಲ. ಇದೇ ಮಾರೀಚನಿಗೆ ವಿಶ್ವಾಮಿತ್ರರ ಯಜ್ಞರಕ್ಷಣೆಯಲ್ಲಿ ಹೂಡಿದ ಬಾಣ ರಾವಣನ ಬಳಿ ತತ್ತ್ವೋಪದೇಶಕ್ಕೂ ನೆರವಾಗುತ್ತದೆ.

ರಾಮಬಾಣದ ರುಚಿ ಉಂಡ ಮಾರೀಚನ ಉಪದೇಶಗಳು ಹಾರ್ದವಾಗಿ ಮೂಡಿ ಬಂದಿವೆ.

ಇನ್ನೂ ಸ್ವಾರಸ್ಯವೆಂದರೆ ಶ್ರೀಹರಿಯ ಧನುಸ್ಸು ಬಂಧವೆಂಬ ಗುಣವನ್ನು ಸೂಚಿಸುತ್ತದೆ. ಅದು ಹೇಗೆಂದು ಮುಂದೆ ನೋಡೋಣ. ಆ ಧನುಸ್ಸಿನಲ್ಲಿ ಕ್ಷಣಕಾಲ ಸಂಬಂಧವನ್ನು ಬಾಣವು ಹೊಂದುವುದರಿಂದ ಅಜ್ಞಾನಕೊಡುವ ಸಾಮರ್ಥ್ಯ ಪಡೆದಿದೆ. ಅರ್ಥಾತ್ ಬಂಧದಲ್ಲಿ ಅಜ್ಞಾನವಿದೆ ಎಂಬ ತಾತ್ಪರ್ಯಾರ್ಥವು ಬಾಣ-ಅಜ್ಞಾನಗಳ ಸಂಬಂಧದಲ್ಲಿದೆ. ಪಂಚಭೂತಗಳ ಬಂಧನದಲ್ಲಿ ಸಿಲುಕಿರುವುದರಿಂದ ಜೀವನು ಅಜ್ಞಾನಿ, ಸಂಸಾರಿ ಎಂಬ ಪದಗಳಿಂದ ಕರೆಸಿಕೊಳ್ಳುತ್ತಾನೆ. ಆದ್ದರಿಂದ ಅಜ್ಞಾನ ಸಂಬಂಧವುಳ್ಳ ಜೀವನನ್ನು ಉಪನಿಷತ್ತು ಬಾಣ ಎಂದು ಹೇಳಿದೆ.

"**ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ**" ಎಂಬಲ್ಲಿ ಜೀವನನ್ನು ಬಾಣ ಎಂದು ಕರೆಯಲಾಗಿದೆ.

* ಇಷ್ಟೇ ಅಲ್ಲದೆ ಅಜ್ಞಾನ ನಿಮಿತ್ತದಿಂದ ಬಂದ ಈ ಶರೀರಕ್ಕೂ ಬಾಣ ಎಂದೇ ಹೆಸರು. "**ಏತದ್ ಬಾಣಮವಷ್ಟಭ್ಯ**" ಇತ್ಯಾದಿ.

ಅಂತು ಈ ಎಂಟು ಆಯುಧಗಳಲ್ಲಿ ಈ ಬಾಣದ ಸ್ಥಾನ ವಿಚಿತ್ರ. ಆದ್ದರಿಂದ ಪರಮಾತ್ಮನು ಚತುರ್ಭುಜಗಳಲ್ಲಿ ಪಂಚಾಯುಧಗಳನ್ನು ಧರಿಸಿದ್ದಾನೆ. ಪಂಚಾಯುಧಗಳಲ್ಲಿ ಪಂಚಮಾಯುಧ ಈ ಬಾಣ. ಆದ್ದರಿಂದ ಬಾಣವನ್ನು ಪಂಚತ್ವ ಉಳ್ಳದ್ದು ಎಂದು ಕರೆಯಬಹುದು. ಸಂಸ್ಕೃತದಲ್ಲಿ ಪಂಚತ್ವ ಶಬ್ದಕ್ಕೆ ಮೃತ್ಯು ಎಂಬುದು ಪರ್ಯಾಯಪದ. ಒಟ್ಟಿನಲ್ಲಿ ಬಾಣ ಎಂದರೆ ಮೃತ್ಯು. ಬಾಣದಿಂದಲೇ ಎಲ್ಲರಿಗೂ ಮೃತ್ಯು. ಅದರಲ್ಲಿಯೂ ಅಜ್ಞಾನವೆಂಬ ಗುಣ ಈ ಬಾಣದ ದೆಸೆಯಿಂದಲಾದ್ದರಿಂದ ಅಜ್ಞಾನವೆಂದರೆ ಬಾಣ, ಬಾಣವೆಂದರೆ ಅಜ್ಞಾನ. ಬದುಕಿನಲ್ಲಿ ಅಜ್ಞಾನಕ್ಕಿಂತಲೂ ಅಧಿಕವಾದ ಮೃತ್ಯು ಯಾವುದಿದೆ? ಆದ್ದರಿಂದ ಈ ಬಾಣವು ಅಜ್ಞಾನಕ್ಕೆ ಅಭಿಮಾನಿಗಳಾದ ದೈತ್ಯರನ್ನು ಅಜ್ಞಾನಿಗಳನ್ನು ಸದೆಬಡಿಯುವುದರಿಂದ **'ಮೃತ್ಯೋಃ ಮೃತ್ಯುಂ'** ಎಂದು ಕರೆಯಬಹುದು.

"**ಪಂಚಾಯುಧ ನಮಸ್ತೇಸ್ತು ಪಂಚಕಾಲ ಪರಾಯಣ**" ಎಂದು ಶಾಂರ್ಙ್ಗಪಾಣಿಯನ್ನು ನೆನೆಯುವಾಗ ಈ ಬಾಣದ ಚಿಂತನೆಯ ಹಿನ್ನೆಲೆಯಲ್ಲಿ ನೆನೆದಲ್ಲಿ ಸಜ್ಜನರಿಗೆ ಪರಮಾತ್ಮನನ್ನು

ಕಾಣಲು ಅಡ್ಡಿಯಾದ ಅಜ್ಞಾನದ ಮೇಲೆ ಬಾಣವನ್ನು ಹರಿಯು ಪ್ರಯೋಗಿಸೀಯಾನು?

**ಶಾಂರ್ಙ್ಗಪಾಣಿಯಿಂದಲೇ ಬಂಧ**

ಪರಮಾತ್ಮನ ಆಯುಧಗಳಲ್ಲಿ ಬಂಧನವುಳ್ಳ ಆಯುಧ ಇದೊಂದೇ. ಧನುಸ್ಸನ್ನು ಸೆಳೆದು ಹಗ್ಗದಿಂದ ಕಟ್ಟುತ್ತೇವೆ. ಕಟ್ಟುವ ಉಪಾಯ ತಿಳಿದುಕೊಳ್ಳಬೇಕು. ಕಟ್ಟಲು ಗೊತ್ತಿಲ್ಲದವ ಧನುಸ್ಸನ್ನು ಕಟ್ಟಲು ಹೋದರೆ ಪ್ರಾಣವೇ ಬಿಟ್ಟುಹೋದೀತು. ಶಿವಧನುಸ್ಸನ್ನು ಕಟ್ಟಲು ಹೋದ ರಾವಣನ ಅವಸ್ಥೆ ಏನಾಯಿತೆಂದು ತಿಳಿಯದವರಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಸೆಟೆದು ನಿಂತ ಧನುಸ್ಸನ್ನು ಹದಗೊಳಿಸಿ ಬಾಗಿಸಿ ಸೆಟೆಯದಂತೆ ಕಟ್ಟುವ ಚಮತ್ಕಾರವೇ ಈ ಬಂಧ. ಇದರ ಒಳಾರ್ಥವಿಷ್ಟೇ – ಅಜ್ಞಾನದ ಘನನಿದ್ರೆಯಲ್ಲಿ ಮುಳುಗಿದ ಜೀವಾತ್ಮನನ್ನು ಹದಗೊಳಿಸಲು ಸುಖದುಃಖಗಳ ಮಿಶ್ರಣವಾದ ಸಂಸಾರರೂಪದಲ್ಲಿ ಬಂಧಿಸಿಡುವವನೇ ಶಾಂಙ್ಗಧನುರ್ಧಾರಿಯಾದ ಶ್ರೀಹರಿ ಎಂದು ಭಾವ.

**"ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ।"**

ಎಲ್ಲರನ್ನೂ ಕಟ್ಟುವ ತಾಕತ್ತುಳ್ಳವ ಧರೆಯಲ್ಲಿ ಶ್ರೀಹರಿಯೊಬ್ಬನೇ! ಆದುದರಿಂದಲೇ ಧರೆಯಧೀಮಂತಧಿಕ್ಷಣರಿಂದ, ಅದಟಿನ ಮದದಲ್ಲಿ ಸೆಟೆದು ನಿಂತ ವೀರಾಧಿವೀರರಿಂದಲೂ ಎತ್ತಲಾಗದ ಕಟ್ಟಲಾಗದ ಶಿವಧನುಸ್ಸನ್ನು ಲೀಲಾಮಾತ್ರದಲ್ಲಿ ಹೆದೆ ಏರಿಸಿದ ಅಪ್ರತಿಹತ ವೀರ ಶ್ರೀಹರಿಯೊಬ್ಬನೇ! ಈ ಬಂಧಪ್ರದತ್ವವೆಂಬ ಗುಣವನ್ನು ಅತಿಶಯವಾಗಿ ತೋರಿದ ಮಹಾನುಭಾವ ಶ್ರೀರಾಮ. ಆದ್ದರಿಂದಲೇ ಅವನಿಗೇ ಮತ್ತೊಂದು ನಾಮ ಕೋದಂಡರಾಮ. ಕೋದಂಡರಾಮನ ಧನುಸ್ಸಿನ ಠೇಂಕಾರಮಾತ್ರ ದಿಂದ ಸೆಟೆದುನಿಂತ ದೈತ್ಯರ ತಂಡವೇ ಭಯದ ಬಂಧನಕ್ಕೆ ತುತ್ತಾಗುತ್ತದೆ.

ಇಷ್ಟೇ ಏನು! ತಪೋಲೋಕನಾಮಕನಾದ ಅಸುರನು ಪರಶುರಾಮನ ಒಳಗೆ ಸೇರಿ ತನಗೆ ಬಂಧನವೇ ಇಲ್ಲ ಎಂದು ಭ್ರಮಿಸಿದಾಗ ಅವನನ್ನು ಶಾಶ್ವತವಾದ ಅಂಧತಮಸ್ಸೆಂಬ ಬಂಧನಕ್ಕೆ ಸೇರಿಸಿದವ ಕೋದಂಡರಾಮ. ಅಂತೆಯೇ ಕಂಸನಿಗೆ ಕೃಷ್ಣನ ಧನುರ್ಭಂಗದಿಂದ ನಿತ್ಯ ಬಂಧನ.

ಸಜ್ಜನರಿಗೂ ಈ ಧನುಸ್ಸಿನಿಂದಲೇ ಬಂಧನ. ಆದರೇ ಬಂಧನಕ್ಕಾಗಿಯೇ ಬಂಧನವಲ್ಲ, ಬಿಡುಗಡೆಗಾಗಿ ಬಂಧನ. ಭಕ್ತಿಪಾಶದಿಂದ ತನ್ನನ್ನು ಕಟ್ಟಲಿ ಎಂದು ಅವರನ್ನು ಭವಬಂಧನದಲ್ಲಿ ಕಟ್ಟಿದ್ದಾನೆ.

("ಕಟ್ಟುವರ ಭವಪಾಶದಿಂದಲಿ ಕಟ್ಟುವನು ಬಹು ಕಠಿಣನಿವ)

"ಕಟ್ಟುವರ ಭವಕಟ್ಟುಬಿಡಿಸುವ" ಕಟ್ಟಿದವನೇ ಗುಣಿಕೆಯನ್ನು ಬಿಡಿಸ ಬೇಕು.

(ಮುಂದಿವರಿಯುವುದು)

ಭಾಗ–5

# ಜೀವನಯಜ್ಞ

ಸಂಕಲನ: ಸುನಂದಕೀ

ತೇಜ–ಜಲ–ಪೃಥಿವ್ಯಾತ್ಮಕ ತ್ರಿಗುಣರೂಪವಾದ ಅನ್ನವು ಆ ಪುರುಷಶರೀರವನ್ನು ಹೊಂದಿ ಮೂರು ಮೂರಾಗಿ ಭಾಗವಾಗುವುದು. ಅದರಲ್ಲಿ ಪೃಥಿವೀ ಭಾಗಸ್ಥ ರುದ್ರದೇವರು ಸ್ವನಿಯಾಮಕ ಅನಿರುದ್ಧನಿಂದ ಉದ್ಬುದ್ಧನಾಗಿ ತನ್ನಿಂದ ಅಭಿಮನ್ಯಮಾನವಾದ ಪೃಥಿವೀ ಭಾಗವನ್ನು ಮೂರು ಭಾಗವನ್ನಾಗಿಸಿ ಅದರಲ್ಲಿ ಯಾವುದು ಸ್ಥೂಲವೋ ಆ ಭಾಗವನ್ನು ಪುರೀಷವನ್ನಾಗಿ ಮಾಡಿ, ಮಧ್ಯಮ ಭಾಗದಿಂದ ಮಾಂಸವನ್ನು, ಸೂಕ್ಷ್ಮಭಾಗಗಳಿಂದ ಮನಸ್ಸಿಗೆ ಉಪಚಯಮಾಡಿ ತಾನೂ ಕೂಡ ಮೂರು ರೂಪಗಳನ್ನು ಹೊಂದಿ ಅವುಗಳ ನಿಯಮನಕ್ಕಾಗಿ ಅಲ್ಲಲ್ಲಿ ಪ್ರವೇಶಿಸುವರು.

ಅದೇ ರೀತಿ ಜಲದಲ್ಲಿರುವ ಮುಖ್ಯಪ್ರಾಣದೇವರೂ ಕೂಡ ಅನಿರುದ್ಧನಿಂದ ಉದ್ಬೋಧಿತರಾಗಿ ತಮ್ಮಿಂದ ಅಭಿಮನ್ಯವಾದ ಜಲತತ್ವವನ್ನು ಮೂರು ಭಾಗವನ್ನಾಗಿಸಿ ಅದರ ಸ್ಥೂಲಭಾಗವನ್ನು ಮೂತ್ರವನ್ನಾಗಿಯೂ, ಮಧ್ಯಮಭಾಗದಿಂದ ರಕ್ತವನ್ನಾಗಿಯೂ ಸೂಕ್ಷ್ಮಭಾಗಗಳಿಂದ ಪ್ರಾಣವಾಯುವಿಗೆ ಉಪಚಯ ಮಾಡಿ ತಾನೂ ಕೂಡ ಮೂರುರೂಪಗಳಿಂದ ಅವುಗಳನ್ನು ಪ್ರವೇಶಿಸುವರು.

ಅದರಂತೆ ತೇಜೋಭಾಗದಲ್ಲಿರುವ ಶ್ರೀದೇವಿಯೂ ಕೂಡ ಅನಿರುದ್ಧನಿಂದ ಉದ್ಬೋಧಿತರಾಗಿ ತಮ್ಮಿಂದ ಅಭಿಮನ್ಯವಾದ ತೇಜೋಭಾಗವನ್ನು ಮೂರಾಗಿಸಿ ಸ್ಥೂಲನಿಂದ ಅಸ್ಥಿಗಳನ್ನೂ, ಮಧ್ಯಭಾಗದಿಂದ ಮಜ್ಜವನ್ನು, ಸೂಕ್ಷ್ಮಭಾಗದಿಂದ ವಾಕ್ ತತ್ವಕ್ಕೆ ಉಪಚಯ ಮಾಡಿ ತಾನೂ ಸಹ ಮೂರು ರೂಪಗಳಿಂದ ಅವುಗಳನ್ನು ಪ್ರವೇಶಿಸುವರು.
ಅವುಗಳ ಪೈಕಿ ಮಜ್ಜದಲ್ಲಿ ಮುಖ್ಯಪ್ರಾಣದೇವರ ಸನ್ನಿಧಾನವಿರುತ್ತದೆ. ಆ ಮಜ್ಜವೇ ರೇತಸ್ಸಾಗುವುದು. ಮಾಂಸಭಾಗವು ರೇತಸ್ಸಾಗುವುದಿಲ್ಲ.

ಈ ರೀತಿ ಕ್ರಮವಾಗಿ ತಂದೆಯಿಂದ ತಿನ್ನಲ್ಪಟ್ಟ ಅನ್ನಕ್ಕೆ ರೇತಸ್ಸ್ವಸ್ಥಿತಿಯು ಬಂದಾಗ ಅನ್ನದಲ್ಲಿರುವ ಸಂಕರ್ಷಣರೂಪ ಭಗವಂತನು ಜೀವನನ್ನು ತೆಗೆದುಕೊಂಡು ರೇತಸ್ಸನ್ನು ಸೇರುತ್ತಾನೆ. ಆ ರೇತಸ್ಸಲ್ಲಿರುವ ಸಂಕರ್ಷಣಾಖ್ಯ ರೂಪವನ್ನು ಸ್ವಲ್ಪಕಾಲ ಪುರುಷನ (ತಂದೆಯ) ಲ್ಲಿರುವ ಭಗವಾನ್ ಪ್ರದ್ಯುಮ್ನನು ಗರ್ಭದಂತೆ ಧರಿಸುತ್ತಾನೆ. ಆಗ ಭಗವಂತನ

ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.

ರೂಪವಿಶೇಷರ ಸಂಬಂಧದಿಂದ ಪುರುಷನಿಗೆ ಸರ್ವಾಂಗದಲ್ಲಿಯೂ ತೇಜೋವಿಶೇಷವು ಕಾಣಲ್ಪಡುತ್ತದೆ. ಅದೇ ಸಮಯದಲ್ಲಿ ವಾಸುದೇವರೂಪಿ ಭಗವಂತನು ಸ್ತ್ರೀ (ತಾಯಿ) ಯೋನಿಯನ್ನು ಗರ್ಭಧಾರಣೆಗೆ ಅನುಕೂಲ ಶಕ್ತಿವುಳ್ಳದ್ದನ್ನಾಗಿಸುತ್ತಾನೆ. ಅನಂತರ ಪುರುಷನಲ್ಲಿರುವ ಪ್ರದ್ಯುಮ್ನರೂಪಿ ಭಗವಂತನು ರೇತಸ್ಸಿನಲ್ಲಿರುವ ಜೀವಸಹಿತ ಸಂಕರ್ಷಣಾಖ್ಯ ರೂಪವನ್ನು ರೇತಸ್ಸಿನ ಮೂಲಕ ಸ್ತ್ರೀಯ ಗರ್ಭದಲ್ಲಿ ಹಾಕುತ್ತಾನೆ. ಅದೇ ಭಗವಂತನಿಗೆ ಪ್ರಥಮ ಜನ್ಮ.

ಅನಂತರ ತಾಯಿಯಲ್ಲಿರುವ ಅನಿರುದ್ಧನು ರೇತಸ್ಸಿನೊಡನೆ ಬಂದ ಜೀವ ಸಹಿತ ಸಂಕರ್ಷಣರೂಪವನ್ನು ಧರಿಸುತ್ತಾನೆ. ಅನಿರುದ್ಧನು ಗರ್ಭಾಶ್ರಯನಾಗಿರುವುದರಿಂದಲೇ ತಾಯಿಯ ಉದರಪ್ರವಿಷ್ಟವಾದ ಅನ್ನಾದಿಗಳು ಜೀರ್ಣವಾದರೂ, ತಂದೆಯ ಶರೀರದಿಂದ ತಾಯಿಯ ಶರೀರವನ್ನು ಪ್ರವೇಶಿಸಿ ಗರ್ಭಭಾಗವನ್ನು ಹೊಂದುವ ರೇತಸ್ಸು ಮೊದಲ ಪದಾರ್ಥಗಳಿಗೆ ನಾಶರಹಿತವಾದ ಸ್ಥಿತಿಯು ಹಾಗೂ ಅಭಿವೃದ್ಧಿಯೂ ಇರುವುದು. ಅಲ್ಲಿಂದಾರಂಭಿಸಿ ತಾಯಿಯು ಪ್ರಸವ ಪರ್ಯಂತವೂ ಆಕೆಯ ಸರ್ವಾಂಗದಲ್ಲಿ ಬಹು ತೇಜಸ್ಸು ಕಾಣುತ್ತದೆ. ಹಾಗೆಯೇ ಆ ರೇತಸ್ಸು ವೃದ್ಧಿ ಹೊಂದುತ್ತಿದ್ದರೂ ಹೊರಗೆ ಹೋಗುವುದು. ಆಗ ರೇತಸ್ಥನಾದ ಭಗವಾನ್ ಸಂಕರ್ಷಣನು ತಾಯಿಯಲ್ಲಿರುವ ತನ್ನ ರೂಪದ ಅನುಮತಿಯಿಂದ ಕ್ರಮವಾಗಿ ಜೀವನಿಗೆ ಶರೀರ ನಿರ್ಮಾಣವನ್ನು ಮಾಡುತ್ತಾನೆ. ಹೇಗೆಂದರೆ– ತಂದೆಯ ದೇಹದಿಂದ ಕಾಲವಿಶೇಷದಲ್ಲಿ ಯೋನಿಯ ಮೂಲಕ ತಾಯಿಯ ಶರೀರವನ್ನು ಪ್ರವೇಶಿಸಿದ ಶುಕ್ರವು, ಅನಿರುದ್ಧ ಪ್ರೇರಿತ ಶೋಣಿತದಿಂದ ಮಿಶ್ರವಾಗಿ ಆ ಉದರದಲ್ಲಿರುವ ಗರ್ಭಕೋಶವನ್ನು ಪ್ರವೇಶಿಸಿ ಸಂಕರ್ಷಣನ ಅಧಿಷ್ಠಾನದ ಮಹಿಮೆಯಿಂದ ಒಂದು ರಾತ್ರಿಯಲ್ಲಿ ಅದು ಕಲಿಲವೆನಿಸುತ್ತದೆ. ಅಲ್ಲಿಂದ ಮೂರು ರಾತ್ರಿಯಲ್ಲಿ ಉದ್ಬುದವಾಗುತ್ತದೆ. ಹತ್ತು ದಿನಗಳಿಗೆ ಹಸಿ ಹಿಟ್ಟಿನ ಉಂಡೆಯಂತೆ ಸ್ವಲ್ಪ ಗಟ್ಟಿಯೂ ಆಗುತ್ತದೆ. ಹದಿನೈದು ದಿನಗಳಿಗೆ ಮಾಂಸಖಂಡದಂತೆ ಅಥವಾ ಘನೀಭೂತಪಿಂಡದಂತೆ ಆಗುವುದು. ಈ ಗರ್ಭಸ್ಥ ಜೀವರ ಯೋಗ್ಯತೆಗನುಗುಣವಾಗಿ ಭಗವಂತನು ಸ್ವೇಚ್ಛೆಯಿಂದ ಆ ಜೀವನಿಗೆ ಇಚ್ಛಾದಿಗಳನ್ನು ಹುಟ್ಟಿಸಿ ಅದನ್ನೇ ನಿಮಿತ್ತವಾಗಿಸಿ ಅವಯವ ಸಮೂಹವನ್ನು ನಿರ್ಮಿಸುತ್ತಾನೆ. ಆ ಘನೀಭೂತವಾದ ಸ್ಥೂಲಪಿಂಡದಲ್ಲಿ ವಿದ್ಯಮಾನವಾದ ಅಂತರಪ್ರಕಾಶದಲ್ಲಿರುವ ಸಂಕರ್ಷಣನು ಅನೇಕ ಪ್ರಕಾರ ಇಚ್ಛಿಸುತ್ತಾನೆ. ಆಗ ಓಜಸ್ಸು ಸಹ ಹಾಗೂ ಬಲಾತ್ಮಕನಾದ ಮುಖ್ಯ ವಾಯುವು ಉತ್ಪನ್ನವಾಗುತ್ತಾನೆ. ಪ್ರಾಣಾಪಾನಾದಿ ಪಂಚರೂಪವನ್ನು ಹೊಂದುವನು.

ಊರ್ಧ್ವಗಮನ ಸ್ವಭಾವವುಳ್ಳ ಆ ಪ್ರಾಣನು ಅಲ್ಲಿಂದ ವೇಗವಾಗಿ ಸಾಗಿದಾಗ ಸ್ಥೂಲವಾದ ಅಂಡದ ಮೇಲುಭಾಗದಲ್ಲಿ ತೆಂಗಿನಕಾಯಿಯ ಮೇಲಿನ ಭಾಗದಲ್ಲಿ ಇಡಲ್ಪಟ್ಟ ನೇರಳೆ ಹಣ್ಣಿನಂತೆ ಅಸ್ಫುಟವಾಗಿ ಮುಖನಾಸಿಕಾದಿ ರಂಧ್ರಗಳು ಉತ್ಪನ್ನವಾಗಿ ಮಂಡಲಾಕಾರವಾದ 'ಶಿರಸ್ಸು' ಎಂದು ಕರೆಯಬಹುದಾದ ಅವಯವವಿಶೇಷವು ಒಂದು ತಿಂಗಳಿಗೆ ಉತ್ಪನ್ನವಾಗುವುದು.

ಅನಂತರ ಭಗವಂತನ ನಾನಾ ಕರ್ಮಗಳನ್ನು ಮಾಡುವ ಇಚ್ಛೆಯಿಂದ ಕೈಗಳೂ, ಗಮನೇಚ್ಛೆಯಿಂದ ಪಾದಗಳೂ, ಪ್ರಜಾನಂದದ ಇಚ್ಛೆಯಿಂದ ಶಿಶ್ನವೂ, ಮಲಾದಿಗಳನ್ನು ಹೊರಹಾಕುವ ಇಚ್ಛೆಯಿಂದ ಗುದವೂ, ಪರಕಾಯ ಪ್ರವೇಶಾಪೇಕ್ಷೆಯಿಂದ ನಾಭಿದ್ವಾರವೂ ಇತ್ಯಾದಿ ಅವಯವಗಳು-ಇಂದ್ರಿಯಗಳು ಎರಡನೆಯ ತಿಂಗಳಿಗೆ ಉತ್ಪನ್ನವಾಗುವುದು. ಆ ಬಳಿಕ ಮೂರು ತಿಂಗಳಿಗೆ ಹರೀಚ್ಛೆಯಿಂದ ನಖ, ರೋಮ, ಚರ್ಮ, ಅಂಗಛಿದ್ರಗಳೂ ಹುಟ್ಟುವವು. ನಾಲ್ಕನೆಯ ತಿಂಗಳಲ್ಲಿ ತ್ವಕ್ ಚರ್ಮ ಮಾಂಸ ರಕ್ತ ಮೇದಸ್ಸು ಮಜ್ಜ ಅಸ್ಥಿ ಎಂಬ ಸತ್ವ ಧಾತುಗಳು ಉತ್ಪನ್ನವಾಗುವುದು. ಆ ದೇಹದಲ್ಲಿ 360 ಸಂಖ್ಯೆಯ ಅಸ್ಥಿಗಳೂ ಮಜ್ಜಗಳೂ ಉತ್ಪನ್ನವಾಗುವುದು. 5ನೇ ತಿಂಗಳಲ್ಲಿ ಹೃದಯಾಕಾಶದಲ್ಲಿ ಪ್ರಾಣನು ಸಂಚಲನದಿಂದ ಹಸಿವು ನೀರಡಿಕೆಗಳೆಂಬ ದ್ವಿರೂಪವನ್ನು ಹೊಂದುವನು. ಆ ಹಸಿವು ನೀರಾಡಿಕೆಯಿಂದ ಶಿರಸ್ಸಿನಲ್ಲಿ ಮುಖವು ಹೊರಟಿತು. ಭಗದ್ವಿಚ್ಛೆಯಿಂದ ರಸಗ್ರಣೇಚ್ಚೇ ಉಂಟಾಗಲು ತತ್ಸಾಧನವಾದ ರಸನೇಂದ್ರಿಯವು ತನ್ನ ಗೋಲಕವಾದ ಕಾಲು ನಾಮಕ ಜಿಹ್ವಾಮೂಲದಿಂದ ಸಹಿತವಾಗಿ ಉತ್ಪನ್ನವಾಯಿತು. ಅನಂತರ ಮಾತನಾಡುವ ಇಚ್ಛೆಯಿಂದಾಗಿ ಮುಖವೆಂಬ ಗೋಲಕದಲ್ಲಿ ವಾಗೀಂದ್ರಿಯವು ಉತ್ಪನ್ನವಾದವು. ಜೀವನ ಶರೀರದಲ್ಲಿ ಅಂತರಾವಕಾಶದಲ್ಲಿ ವಿರುದ್ಧವಾದ ವಾಯುವಿನ ನಿರ್ಗಮನಕ್ಕಾಗಿ ಪ್ರವೃತ್ತಿ ಅದರ ನಿರ್ಗಮನಕ್ಕಾಗಿ ನಾಸಿಕ ರಂಧ್ರಗಳು ಉತ್ಪನ್ನವಾದುವು. ಗಂಧಗ್ರಹಣೇಚ್ಛೆಯಿಂದ ಅಲ್ಲಿ ಘ್ರಾಣೇಂದ್ರಿಯವು ಹುಟ್ಟಿತ್ತು. ತಾನು ಹೇಗಿರುತ್ತೇನೆಂದು ತನ್ನನ್ನು ನೋಡಿಕೊಳ್ಳುವ ಇಚ್ಛೆಯಿಂದ ಎರಡು ಕಣ್ಣು ಗೋಲಕಗಳೂ ಇಂದ್ರಿಯಗಳೂ ಹುಟ್ಟಿದವು. ದೇವಾದಿಗಳಿಂದ ಬೋಧಿಸಲ್ಪಡುವವನಿಗೆ ಅದರ ಶ್ರವಣೇಚ್ಛೆಯಿಂದ ಶ್ರೋತ್ರೇಂದ್ರಿಯದ-ಗೋಲಕವು ಸ್ಪಷ್ಟವಾದವು. ಆಯಾಯಾ ಪದಾರ್ಥಗಳ ಕಾಠಿಣ್ಯ, ಮೃದುತ್ವ, ಔಷ್ಣ್ಯತ್ವ ಶೈತ್ಯಗಳನ್ನು ತಿಳಿಯಲು ತ್ವಗೀಂದ್ರಿಯವು ಉತ್ಪನ್ನವಾಯಿತು. ಭಗವಂತನ ಮಹಾಮಾಧ್ಯಾನಾದಿಗಳ ಇಚ್ಛೆಯಿಂದ ಗೋಲಕ ಭೂತವಾದ ಹೃದಯ ಹಾಗೂ ಮನಸ್ಸು ಎನ್ನುವ ಇಂದ್ರಿಯವೂ ಹುಟ್ಟಿದವು.

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ.**

ಅನಂತರ ಸಂಕಲ್ಪವಿಕಲ್ಪಾದಿಗಳ ಬಯಕೆಯಿಂದ ಸಂಕಲ್ಪವಿಕಲ್ಪರೂಪವಾದ ಮನಸ್ಸು, ಶ್ರುತವಾದ ಅರ್ಥಗಳನ್ನು ನಿಶ್ಚಯಿಸಲು 'ಬುದ್ಧಿ' ಅಸ್ವರೂಪದಲ್ಲಿ ಸ್ವರೂಪಬುದ್ಧಿಯ ಬಯಕೆಯಿಂದ 'ಅಹಂಕಾರವೂ', ಸ್ಮರಣೇಚ್ಛೆಯಿಂದ 'ಚಿತ್ತ'ವೂ ಚೇತೋವ್ಯಾಪ್ತಿ ಬಯಕೆಯಿಂದ 'ಚೇತನವೂ' ಈ ರೀತಿ ಮನಸ್ಸಿನ ಪಂಚಪ್ರಬೇದಗಳಾದ ಪಂಚವೃತ್ತಿಗಳೂ ಹೃದಯದಲ್ಲಿಯೇ ಉತ್ಪನ್ನವಾದವು. ಅನ್ನ ಪಾನಾದಿಗಳ ಬಯಕೆಯಿಂದ ಉದರ, ಕುಕ್ಷಿ ಹಾಗೂ ನಾಡಿಗಳು ಉತ್ಪನ್ನವಾದವು.

(ಮುಂದಿವರಿಯುವುದು)

(2ನೇ ಪುಟದಿಂದ)

ಈ ಶ್ಲೋಕಕ್ಕೆ ಶ್ರೀಮಧ್ವಾಚಾರ್ಯರ ಶ್ರೀ ಭಾಗವತತಾತ್ಪರ್ಯನಿರ್ಣಯವು ಪ್ರಮಾಣ ಪುರಸ್ಸರವಾಗಿ ಬೆಳಕು ಚೆಲ್ಲಿದೆ. **"ಆತ್ಮನೋ ವೃದ್ಧಿಶ್ಚ ಫಲಾರ್ಥೇ ಇತಿ"** ತನಗೆ ಬಂದ ಸಮೃದ್ಧಿಯು ತನ್ನ ಭೋಗಜೀವನಕ್ಕಾಗಿ ಅಲ್ಲ. ದೇವರು ತನಗೆ ಕೊಟ್ಟದ್ದು ಸದ್ವಿನಿಯೋಗಕ್ಕಾಗಿ. ಅಂದರೆ ತನ್ನ ಸಂಪತ್ತೆಲ್ಲಾ ಪರರಿಗಾಗಿ ಪರ ಅಂದರೆ ಮೂರು ಅರ್ಥಗಳು. ಪರ ಅಂದರೆ ಬೇರೆಯವರು ಸಜ್ಜನರು ಎಂದು ಒಂದು ಅರ್ಥ. ಎರಡನೆಯ ಅರ್ಥ ನಮಗಿಂತ ದೊಡ್ಡವರು(ಹಿರಿಯರು) ಎಂದೂ ಸಹ. ಮೂರನೆಯ ಅರ್ಥ ಪರಮಾತ್ಮ ಎಂದು ಆರ್ಥ. **"ಸಜ್ಜನಾರ್ಥೇ ಅನುಮನ್ಯೇತ ಐಹಿಕೇ ವೃದ್ಧಿಂ ಆತ್ಮನಃ"** ಐಹಿಕ ಸಂಪತ್ತು ನಮ್ಮಲ್ಲಿದ್ದದೆಲ್ಲಾ ಸಜ್ಜನರಿಗಾಗಿ ನಾವು ಸಂಪತ್ತಿನ ಮಾಲೀಕರಲ್ಲ. ಸಂಪತ್ತಿನ ಸಂರಕ್ಷಕರಷ್ಟೇ. **"ಪಾರಿತ್ರಿಕೀಂ ಐಹಿಕೀಂ ಚ ಪ್ರೀತಯೇ ಗುರುದೇವಯೋಃ"** ಐಹಿಕ ಆಮುಷ್ಮಿಕ ಸಮೃದ್ಧಿಯೆಲ್ಲಾ ಗುರುಗಳಗಾಗಿ ದೇವರಿಗಾಗಿ. **"ದೇವತಾನಾಂ ಚ ಸರ್ವೇಷಾಂ ಸ್ವೋತ್ತಮಾನಾಂ ಚ ಸರ್ವಶಃ"** ನಮ್ಮ ಸಕಲ ಐಸಿರಿಗಳೆಲ್ಲಾ ದೇವತೆಗಳ ಪ್ರೀತಿಗಾಗಿ, ಸದಾಚಾರ ಸತ್‌ಸಾಧನೆಗಳ, ಸ್ವೋತ್ತಮರ ಸೇವೆಗಾಗಿ. ಭೂಮಿಯ ಸಕಲ ವ್ಯಾಪಾರಗಳೂ ತನ್ನ ಬಸಿರಲ್ಲಿನ ಸಕಲ ಸಂಪತ್ತುಗಳೂ ಪರರಿಗಾಗಿ, ಪರಮಾತ್ಮನಿಗಾಗಿ.

ಹಾಗೆ ನಮ್ಮ ಗುರು–ಹಿರಿಯರುಗಾಗಿ ನಮ್ಮಿಂದ ಸಾಧನೆ ಮಾಡಿಸುವ ದೇವತೆಗಳಿಗಾಗಿ ಜೀವೋತ್ತಮರಾದ ವಾಯುದೇವರಿಗಾಗಿ, ಸರ್ವೋತ್ತಮನನಾದ ಶ್ರೀಹರಿಗಾಗಿ ಎನ್ನುವ ವಾದವನ್ನು ಪೃಥಿವೀ ಕಲಿಸಿ ನಿಜವಾದ ಗುರುವಾಗಿದ್ದಾಳೆ ಅನ್ನುತ್ತದೆ ಶ್ರೀಮದಾಚಾರ್ಯರು ಉದಾಹರಿಸಿದ ಭಾಗವತದ ಮೂಲಕ್ಕೆ ಪೂರಕವಾದ ಈ ಪ್ರಮಾಣವಾಕ್ಯ.

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

# ಸುಖವನ್ನೊಪ್ಪದವರು ದೇವರನ್ನೂ ದುಃಖಿಯಾಗಿಸಿದರು

-ಅನಂತಕೃಷ್ಣಾಚಾರ್ಯ,ಉಡುಪಿ

ಶ್ರೀವಿಷ್ಣುಮಂಗಲ ದೇವಾಲಯದಲ್ಲಿ ಆಚಾರ್ಯರು ತಮ್ಮ ಪ್ರವಚನವನ್ನು ಮುಂದುವರಿಸುತ್ತಾ- 'ನಾರಾಯಣನು ಅನಂತಕಲ್ಯಾಣಗುಣಪೂರ್ಣ ಎಂದು ಹೇಳಿದ ಕೂಡಲೆ ಕೆಲವರು (ವೈಶೇಷಿಕರು) ಹೀಗೆ ಆಕ್ಷೇಪಿಸುವದುಂಟು. ಜಗತ್ಕರ್ತೃವಾದ ಭಗವಂತನನ್ನು ಆನಂದವೇ ಮೊದಲಾದ ಅನಂತಕಲ್ಯಾಣಗುಣವುಳ್ಳವನೆಂದು ಹೇಳಬೇಡಿ. ಹಾಗೆ ಹೇಳಿದರೆ ಅವನಲ್ಲಿ ದುಃಖವೇ ಮೊದಲಾದ ದೋಷಗಳುಂಟು ಎಂದು ಹೇಳಿದಂತಾಗುತ್ತದೆ. ಜಗತ್ತಿನಲ್ಲಿ ಯಾರಲ್ಲಿ ಸುಖವಿದೆಯೋ ಅವರಲ್ಲಿ ದುಃಖವೂ ಇರುವುದು ಕಂಡಿದೆ. ಸುಖ-ದುಃಖಗಳೆರಡು ಯಾವತ್ತೂ ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಆದ್ದರಿಂದಲೆ **'ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್'** ಎಂಬ ಮಾತು ಪ್ರಸಿದ್ಧ. ಹೀಗಾಗಿ ಜಗತ್ಕರ್ತೃವಿನಲ್ಲಿ ಸುಖವಿದೆಯೆಂದರೆ ದುಃಖವೂ ಇದೆಯೆಂದು ಒಪ್ಪಿದಂತಾಗುತ್ತದೆ. ಆದ್ದರಿಂದ ಜಗತ್ಕರ್ತೃವಾದ ದೇವರನ್ನು ಗುಣರಹಿತನೆಂದು ಹೇಳುವುದು ಒಳಿತು' ಎಂಬುದು ವೈಶೇಷಿಕರ ವಾದ. ಆದರೆ ಇದು ಸರಿಯಲ್ಲ. ಕೇವಲ ತಲೆಗೆ ತೋಚಿದ ಅನುಮಾನದಿಂದಲೆ ದೇವರಲ್ಲಿ ಸುಖವಿಲ್ಲವೆಂದು ಸಾಧಿಸಲು ಹೊರಟರೆ ಅಂತಹ ತಲೆಗೆ ತೋಚಿದ ಅನುಮಾನದಿಂದಲೆ ದೇವರಲ್ಲಿ ಯಾವ ಜ್ಞಾನವೂ ಇಲ್ಲವೆಂದೂ ಸಾಧಿಸಬಹುದು. ಜಗತ್ತಿನಲ್ಲಿ ಯಾರಲ್ಲಿ ಜ್ಞಾನವಿದೆಯೋ ಅವರಲ್ಲಿ ಅಜ್ಞಾನ-ವಿಪರೀತಜ್ಞಾನಗಳು ಒಟ್ಟಿಗೆ ಇರುವುದು ಕಂಡಿದೆ. ಹೀಗೆ ಭಗವಂತನನ್ನು ಜ್ಞಾನಿ ಎಂದು ಹೇಳಿದರೆ ಅಜ್ಞಾನಿ ಎಂದೂ ಹೇಳಿದಂತಾಯಿತಲ್ಲವೆ?

ಭಗವಂತನನ್ನು ಅಜ್ಞಾನಿ ಎಂದು ಹೇಳಬೇಡಿ. ಪರಮಪ್ರಮಾಣವಾದ ವೇದವು **'ಯಃ ಸರ್ವಜ್ಞಃ ಸರ್ವವಿತ್'** ಎಂದು ದೇವರನ್ನು ಸರ್ವಜ್ಞನೆಂದು ಸ್ಪಷ್ಟವಾಗಿ ಸಾರುತ್ತಿವೆ ಎಂದು ಹೇಳುವುದಾದರೆ ಅದೇ ವೇದವು ಸ್ಪಷ್ಟವಾಗಿಯೇ **'ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ', 'ಆನಂದಂ ಬ್ರಹ್ಮೇತಿ ವ್ಯಜಾನಾತ್'** ಹೀಗೆ ಭಗವಂತನನ್ನು ಆನಂದಪೂರ್ಣ ಎಂದು ಹೊಗಳುತ್ತಿರುವುದು ನಿನ್ನ ಕಿವಿಗೆ ಬಿದ್ದಿಲ್ಲವೆ?

ಎಲೋ ಮೂರ್ಖ ವೈಶೇಷಿಕನೇ, ನೀನು ಭಗವಂತನಲ್ಲಿ ದುಃಖ ಬಂದೀತೆಂಬ ಭ್ರಾಂತಿಯಿಂದ ಸುಖವನ್ನೂ ಒಪ್ಪುವುದಿಲ್ಲವೆಂದು ಹೇಳುತ್ತಾ ಅಂತಿಮವಾಗಿ ಜಗತ್ಕರ್ತೃವಾದ

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.

ದೇವರನ್ನು ದುಃಖಿ ಎಂದೇ ಒಪ್ಪುವಿಯಲ್ಲವೆ?

ವೈಶೇಷಿಕರು ಗುಣ-ಗುಣಿಗಳಿಗೆ ಇರುವ ಸಂಬಂಧವನ್ನು 'ಸಮವಾಯ' ಎಂದು ಕರೆಯುತ್ತಾರೆ. ಈ ಸಮವಾಯ ಸಂಬಂಧ ನಿತ್ಯ ಹಾಗೂ ಒಂದೇ ಆಗಿದೆ ಎನ್ನುವುದು ಅವರ ಮತ. ಉದಾ: ಜಗತ್ತಿನಲ್ಲಿರುವ ಸಕಲ ಜೀವರಲ್ಲಿಯೂ ದುಃಖವಿರುವುದು ಕಂಡಿದೆ. ದುಃಖವೆಂಬುದು ಗುಣವಾದರೆ ದುಃಖವಿರುವ ಸಂಸಾರಿ ಜೀವ ಗುಣಿ. ವೈಶೇಷಿಕರ ಪ್ರಕಾರ ದುಃಖಕ್ಕೂ ಸಂಸಾರಿ ಜೀವನಿಗೂ ಏನು ಸಂಬಂಧವೆಂದರೆ 'ಸಮವಾಯ ಸಂಬಂಧ' ಎನ್ನುತ್ತಾರೆ.

ಜಗತ್ಕರ್ತೃವಾದ ಭಗವಂತನಲ್ಲಿ ಇದೇ ವೈಶೇಷಿಕರು ಜ್ಞಾನ-ಇಚ್ಛಾದಿ ಗುಣಗಳನ್ನು ಒಪ್ಪುತ್ತಾರೆ. ಈ ಗುಣಗಳು 'ಸಮವಾಯ ಸಂಬಂಧ' ದಿಂದ ಭಗವಂತನಲ್ಲಿ ಇವೆಯೆಂದು ಪ್ರತಿಪಾದಿಸುತ್ತಾರೆ. ಆದರೆ ಅವರ ಪ್ರಕಾರ ಎಲ್ಲೆಡೆಯೂ ಇರುವ 'ಸಮವಾಯ' ಒಂದೇ ಅಗಿದೆ. ಅಂದರೆ ಭಗವಂತನಲ್ಲಿರುವ ಜ್ಞಾನ-ಇಚ್ಛಾದಿ ಗುಣಸಮವಾಯವೂ ಸಂಸಾರಿ ಜೀವನಲ್ಲಿರುವ ದುಃಖ ಸಮವಾಯವೂ ಒಂದೇ ಎಂದು ಹೇಳಿದಂತಾಯಿತು. ಹೀಗೆ ಸಮವಾಯ ಸಂಬಂಧದ ಮೂಲಕ ಭಗವಂತನಲ್ಲಿ ದುಃಖವನ್ನು ಒಪ್ಪಿದಂತಾಯಿತಲ್ಲವೆ? ಒಟ್ಟಾರೆ ಭಗವಂತನಲ್ಲಿ ದುಃಖ ಬಂದೀತೆಂದು ಸುಖವನ್ನು ಒಪ್ಪಲು ಇಷ್ಟಪಡದ ವೈಶೇಷಿಕ ಅಂತಿಮವಾಗಿ ಭಗವಂತನನನ್ನು ದುಃಖಿ ಎಂದೇ ಹೇಳುತ್ತಾನಷ್ಟೇ.

ಇದಕ್ಕಿಂತ ದೇವರಲ್ಲಿ ನಿರ್ದುಃಖಾನಂದವನ್ನು ಒಪ್ಪಬಹುದಲ್ಲವೆ? ಜಗತ್ತಿನಲ್ಲಿರುವ ಸಂಸಾರಿಯಲ್ಲಿರುವುದು ಅಲ್ಪವಾದ ಆನಂದ. ಆದ್ದರಿಂದಲೇ ಅದರೊಡನೆ ದುಃಖವೂ ಇರುವುದು ಕಂಡಿದೆ. ಭಗವಂತ ಸಂಸಾರಿ ಜೀವನಿಗಿಂತ ಸಂಪೂರ್ಣ ಭಿನ್ನವಾಗಿದ್ದಾನೆ. ಆದ್ದರಿಂದ ಅವನಲ್ಲಿರುವುದು ಪೂರ್ಣಾನಂದ. ಎಲ್ಲಿ ಪೂರ್ಣಾನಂದವಿದೆಯೋ ಅಲ್ಲಿ ದುಃಖದ ಲವಲೇಶಕ್ಕೂ ಅವಕಾಶವಿಲ್ಲ. ಆದ್ದರಿಂದ ಸುಖವಿರುವಲ್ಲಿ ದುಃಖವಿರಲೇಬೇಕೆಂಬ ನಿಯಮ ಭಗವಂತನಲ್ಲಿ ಕೂಡುವುದಿಲ್ಲ. ಹಾಗೆಯೇ ಯಾರು ಅಲ್ಪಜ್ಞನೋ ಅವನಲ್ಲಿ ಮಾತ್ರ ಅಜ್ಞಾನ-ವಿಪರೀತ ಜ್ಞಾನಗಳು ಕಂಡಿವೆ. ಸಂಸಾರಿ ಜೀವ ಅಲ್ಪಜ್ಞ, ಆದ್ದರಿಂದಲೆ ಅವನಲ್ಲಿ ಅಜ್ಞಾನ-ವಿಪರೀತ ಜ್ಞಾನಗಳು ಕಂಡಿವೆ. ಭಗವಂತ ಸರ್ವಜ್ಞ, ಆದ್ದರಿಂದ ಅವನಲ್ಲಿ ಅಜ್ಞಾನ-ವಿಪರೀತ ಜ್ಞಾನಗಳಿಗೆ ಅವಕಾಶವೇ ಇಲ್ಲ. ಹೀಗೆ ಭಗವಂತನನ್ನು ಸಂಸಾರಿ ಜೀವನಿಗಿಂತ ಸಂಪೂರ್ಣ ಭಿನ್ನನೆಂದು ಚಿಂತಿಸಿದಾಗ ಮಾತ್ರವೇ ವೇದ ಹೇಳಿದ 'ಸರ್ವಜ್ಞ' 'ಆನಂದಮಯ' ಮುಂತಾದ ಶಬ್ದಗಳು ಭಗವಂತನನ್ನು ಹೊಗಳುತ್ತಿವೆ ಎನ್ನಲು ಸಾಧ್ಯವಾಗುತ್ತದೆ.

ಮುಂದುವರಿಯುತ್ತದೆ.....

ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.

ಭಾಗ–5

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಸರ್ವಮೂಲಗ್ರಂಥಗಳಲ್ಲಿ ಒಂದಾದ ತಂತ್ರಸಾರಸಂಗ್ರಹದ ಆದಿಯಲ್ಲಿ, ಆಚಾರ್ಯ ಮಧ್ವರು ಅಕಾರಾದಿ ವರ್ಣಪ್ರತಿಪಾದ್ಯನಾದ ಪರಮಾತ್ಮನ ರೂಪಗಳನ್ನು ವಿವರಿಸಿ, ಸರ್ವವರ್ಗ ಪ್ರತಿಪಾದ್ಯತ್ವ, ಸರ್ವಶಬ್ದವಾಚ್ಯತ್ವವು ಶ್ರೀಹರಿಗೆ ಉಂಟೆಂದು ನಿರೂಪಿಸಿದ್ದಾನೆ. ಎಲ್ಲಾ ವರ್ಣಗಳ–ಧ್ವನಿಗಳ–ಶಬ್ದಗಳ–ಅರ್ಥಗಳ–ಅಭಿವ್ಯಕ್ತಿಗೆ ಸರ್ವಸೃಷ್ಟಿಕರ್ತನಾದ ಶ್ರೀಹರಿಯ ಇಚ್ಛೆಯೇ ಮುಖ್ಯ ಕಾರಣ. ಶ್ರೀಹರಿಯು ವರ್ಣ–ಧ್ವನಿ–ಶಬ್ದ–ಅರ್ಥಗಳಲ್ಲಿ ತಾನಿದ್ದು ಅವುಗಳಲ್ಲಿ ಸತ್ತಾಪ್ರದನಾಗಿ ಅವುಗಳಿಂದ ವಾಚ್ಯನೂ ಆಗಿರುವನು. ಲೋಕ ದೃಷ್ಟಿಯಲ್ಲಿ ನಿಂದಾರ್ಥ ದ್ಯೋತಕಗಳಾದ ಹೇಯ, ತುಚ್ಛ, ದುಃಖಿ ಇತ್ಯಾದಿ ಶಬ್ದಗಳಿಂದಲೂ ಶ್ರೀಹರಿಯೇ ವಾಚ್ಯನಾಗಿರುವನು. ಇದನ್ನು ಸ್ಪಷ್ಟೀಕರಿಸುತ್ತಾ ವಿಜಯದಾಸರು ತಮ್ಮ ಒಂದು ಸುಳಾದಿಯಲ್ಲಿ

ಆವನಾದರು ಹಳಿಯಲಿ ಉಗುಳಲಿ<br>
ಆವನಾದರು ಬೈಯಲಿ ಕಾಯಲಿ<br>
ಆವನಾದರು ಹೊಡೆಯಲಿ ತಡೆಯಲಿ<br>
ಆವನಾದರು ಪೊಗಳಲಿ ಅಪ್ಪಲಿ<br>
ಆವನಾದರು ಉಣಿಸಲಿ ಉಡಿಸಲಿ<br>
ಆವನಾದರು ಛೀ ಛೀ ಎನ್ನಲಿ<br>
ಆವನಾದರು ಥೂ, ಥೂ ಎನ್ನಲಿ<br>
ಆವನಾದರು ಭಂಗಿಸಲಿ, ಮತ್ತವನಾದರು ಹಂಗಿಸಲಿ<br>
ಆವನಾದರು ಏನೆನಲಿ ಆವನಾದರು<br>
ಈ ವರ್ಣಗಳು ಭಗವನ್ನಾಮಗಳೋ<br>
ಜೀವನು ಮುಕ್ತನೋ ಈ ವಿಧದಿ ತಿಳಿದವನು<br>
ನೋವು ನೋವುಗಳಲ್ಲಿ ಪಾವನವಾದ ಭಕುತಿಯಲ್ಲಿ ಸ್ವಾ–<br>
ಭಾವಿತನೀನಾಗೋ ಜ್ಞಾನಿನೀನಾಗೋ<br>
ಯಾವತ್ತು ಇಂದ್ರಿಯಗಳ ವ್ಯಾಪರ ಸೇವೆ ಶ್ರೀಹರಿಗೆನ್ನು<br>
ತ್ರೈವಿಧ ಜೀವರು ಇದನೆ ತೊರೆದು ಮ–

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.

ತ್ತಾವುದೋ ಆಡುವರೋ ವರ್ಣಗಳಿಲ್ಲದೇ
ದೇವೇಶನ್ನ ಒಲಿಸಬೇಕಾದರೆ
ಈ ಉಪಾಯವು ಬೇಕು ಎಲ್ಲಿದ್ದರು ಕೇಳು
ಕಾಮಜನಕ ನಮ್ಮ ವಿಜಯವಿಟ್ಠಲರೇಯ
ಆವಾವ ವರ್ಣಗಳಂತೆ ಒಳಗಿದ್ದು
ಕಾವನು ಶರಣರನು ಒಡನೊಡನೆ ಬರುವ॥
"ಅಕ್ಷಾರಾಕ್ಷರದಿಂದ ಭಗವನ್ನಾಮವೆ ಚಿಂತಿಸು
ಅಕ್ಷರಕ್ಷರ ಪುರುಷ ವಿಜಯವಿಟ್ಠಲ ಸುಳಿವ"

ಎಂದು ಹೇಳಿ ಯಾವ ಶಬ್ದವನ್ನು ಶ್ರವಣ ಮಾಡಿದಾಗಲೂ ತದಂತರ್ಗತನಾದ ತಚ್ಛಬ್ದ ವಾಚ್ಯನಾದ ಪರಮಾತ್ಮನನ್ನು ಮನದಲ್ಲಿ ನೆನೆದು ಸೇವಿಸುವ ಉಪಾಸಕನು ಜೀವನ್ಮುಕ್ತನೆನಿಸುವನು ಎಂಬ ತತ್ವವನ್ನು ಸ್ಪಷ್ಟಪಡಿಸಿರುವರು.

ವಿಜಯದಾಸರೇ ತಮ್ಮ ಇನ್ನೊಂದು ಕೀರ್ತನೆಯಲ್ಲಿ

"ಆನಂದ ಆನಂದ ಮತ್ತೆ ಪರಾಮಾನಂದ
ಆನಂದನ ಕಂದ ಒಲಿಯೆ ಏನಂದದ್ದೇ ವೇದವೃಂದ
ಆ ಮೊದಲು ಕ್ಷಕಾರಂತ ಈ ಮಹಾವರ್ಣಗಳೆಲ್ಲ
ಸ್ವಾಮಿಯಾದ ವಿಷ್ಣುವಿನ ನಾಮವೆಂದು ತಿಳಿದವರಿಗೆ"

ಎಂದು ಹೇಳಿ ಮೇಲಿನ ವಿಷಯವನ್ನೇ ಸಮರ್ಥಿಸಿರುವರು.

ಮಧ್ವರ ಮತವನ್ನು ಅನುಸರಿಸಿ ಅನುಸಂಧಾನ ಪೂರ್ವಕ ಪ್ರತಿ ನಡೆ-ನುಡಿಗಳಲ್ಲೂ ಶ್ರೀಹರಿಯ ನಾಮ ರೂಪಗಳನ್ನು ಕಾಣುವವನ ಪ್ರತಿಮಾತುಗಳು ವೇದವೃಂದವೇ ಆಗಿ ಅವನ ಜನ್ಮಧನ್ಯತೆಗೆ ಕಾರಣವಾಗುವುದು.

ಜಗನ್ನಾಥದಾಸರೂ ಸಹ ವರ್ಣಪ್ರಕ್ರಿಯಾ ಸಂಧಿಯ ಆದಿಯಲ್ಲಿ

"ಹರಿಯೆ ಪಂಚಾಶತ್ವರ್ಣಸು-
ಸ್ವರ ಉದಾತ್ತಾನುದಾತ್ತ ಪ್ರಚಯ
ಸ್ವರಿತ ಸಂಧಿ ವಿಸರ್ಗ ಬಿಂದುಗಳೊಳಗೆ ತದ್ವಾಚ್ಯ
ಇರುವ ತತ್ತನ್ನಾಮರೂಪಗ-
ಳರಿತುಪಾಸನೆ ಗೈವರಿಳೆಯೊಳು

( 40ನೇ ಪುಟಕ್ಕೆ)

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

ಪುರಾಣ ಪರಿಚಯ

ಭಾಗ–24

# ಶ್ರೀವಿಷ್ಣುಪುರಾಣ

## ಕಂಡು ಮುನಿ ಮತ್ತೆ ಎಚ್ಚರಗೊಂಡ

–ಸ್ಫೂರ್ತಿ

ಕಂಡು ಮುನಿಯು ಪ್ರಮ್ಲೋಚೆಯೊಡನೆ ನೂರಾರು ವರ್ಷಗಳ ಕಾಲ ರಮಿಸಿದ. ಮನ್ಮಥನಿಂದ ಆವಿಷ್ಟನಾದ ಅವನಿಗೆ ದಿನದಿಂದ ದಿನಕ್ಕೆ ಅವಳಲ್ಲಿ ಮತ್ತಷ್ಟು ಗಾಢವಾದ ಪ್ರೀತಿ ವೃದ್ಧಿಯಾಗುತ್ತಲೇ ಸಾಗಿತು. ಒಮ್ಮೆ ಸಾಯಂಕಾಲದ ವೇಳೆಗೆ ಕಂಡು ಮುನಿಯು ಆಶ್ರಮದಿಂದ ಗಡಿಬಿಡಿಯಿಂದ ಹೊರಹೊರಟ. ಪ್ರಮ್ಲೋಚೆಯು 'ಪೂಜ್ಯರೇ, ತಾವು ಎಲ್ಲಿಗೆ ಹೊರಟಿರಿ' ಎಂದು ಕೇಳಿದಳು. ಋಷಿಯು 'ಹೇ ಶುಭೆ, ಸಾಯಂಸಂಧ್ಯಾವಂದನೆಯ ಸಮಯವಾಗುತ್ತಿದೆ. ಅದಕ್ಕಾಗಿ ತೆರಳುತ್ತಿದ್ದೇನೆಂದು ಉತ್ತರಿಸಿದನು.

**ಪ್ರಮ್ಲೋಚೆ–** ಸಕಲಧರ್ಮವನ್ನು ಬಲ್ಲ ಮುನಿಯೆ, ಇಂದು ಮಾತ್ರ ನಿಮಗೆ ಸಂಜೆಯಾಗುತ್ತಿರುವುದೆ? ನನ್ನೊಡನೆ ನೂರಾರು ವರ್ಷಗಳನ್ನು ಕಳೆದಿರಿ. ಆಗ ಬಂದು ಸಂಜೆಯ ನೆನಪೂ ಬರದ ನಿಮಗೆ ಇಂದು ಏಕೆ ಸಂಜೆಯ ನೆನಪಾಗುತ್ತಿದೆ. ನಿಮ್ಮ ಮಾತು ಯಾರಿಗೆ ತಾನೆ ಆಶ್ಚರ್ಯವನ್ನುಂಟು ಮಾಡಲಾರದು.

**ಕಂಡು ಮುನಿ–** ನೀನು ಬೆಳಗ್ಗೆ ನದೀತೀರದಿಂದ ಬಂದು ನನ್ನ ಆಶ್ರಮವನ್ನು ಪ್ರವೇಶಿಸಿದ್ದನ್ನು ಕಂಡಿದ್ದೇನೆ. ಈಗ ಸಂಜೆಯಾಗುತ್ತಿದೆಯಷ್ಟೆ. ನಾನು ನಿನ್ನೊಡನೆ ಕಳೆದದ್ದು ಬೆಳಗ್ಗಿನಿಂದ ಈಗ ಸಂಜೆಯವರೆಗೆ ಮಾತ್ರ. ಮತ್ತೇಕೆ ಅಪಹಾಸ್ಯ ಮಾಡುತ್ತಿರುವಿ?

**ಪ್ರಮ್ಲೋಚೆ–** ಹೌದು, ನಾನು ಬೆಳಗ್ಗೆ ಬಂದದ್ದೇನೋ ಸರಿಯೆ, ಆದರೆ ಇಂದಲ್ಲ, ನೂರಾರು ವರ್ಷಗಳ ಹಿಂದೆ.

ಗಾಬರಿಗೊಂಡ ಕಂಡು ಮುನಿ ಎಷ್ಟು ವರ್ಷಗಳು ಕಳೆಯಿತೆಂದು ಪ್ರಶ್ನಿಸಲು ಪ್ರಮ್ಲೋಚೆಯು ಒಂಭೈನೂರ ಏಳುವರ್ಷ, ಆರುತಿಂಗಳು, ಮೂರು ದಿನಗಳು ಕಳೆಯಿತೆಂದು ಉತ್ತರಿಸಿದಳು. ಕಂಡು ಮುನಿಯು ನೀನು ಹೇಳುತ್ತಿರುವುದು ಸತ್ಯವೆ? ಎಂದು ಮತ್ತೆ ಮತ್ತೆ ಪ್ರಶ್ನಿಸಿದ. 'ನೀನು ಸುಳ್ಳು ಹೇಳುತ್ತಿರುವಿ ಎಂದು ನನಗೆ ತೋರುತ್ತಿದೆ' ಎಂದಾಗ ಪ್ರಮ್ಲೋಚೆಯು 'ಪೂಜ್ಯರೆ ಧರ್ಮಮಾರ್ಗದಲ್ಲಿರುವ ನಿಮ್ಮ ಬಳಿ ನಾನು ಸುಳ್ಳು ಹೇಳುವುದಾದರೂ ಹೇಗೆ ಸಾಧ್ಯ' ವೆಂದು ವಿನಯದಿಂದ ನುಡಿದಳು. ಕಂಡುಮುನಿ ಗಾಬರಿಗೊಂಡ. ತನ್ನನ್ನು ತಾನೆ ಹಳಿದುಕೊಂಡ. ತನ್ನ ತಪಸ್ಸೆಲ್ಲವೂ ನಷ್ಟವಾಯಿತೆಂದು

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,

ಕೊರಗಿದ. **'ಯೋಷಿನ್ಮೋಹಾಯ ನಿರ್ಮಿತಾ'** ಎನ್ನುತ್ತಾ ಹೆಣ್ಣು ಮೋಹ ಉಂಟುಮಾಡಲೆಂದೇ ನಿರ್ಮಿಸಲ್ಪಟ್ಟಿದ್ದಾಳೆಂದು ಹೆಣ್ಣನ್ನು ಜರಿದ. ಈ ಸಂಸಾರವೆಂಬ ಸಾಗರವನ್ನು ದಾಟಿದಾಗಲೇ ಭಗವಂತನನ್ನು ಪಡೆಯಲು ಸಾಧ್ಯ. ಆದರೆ ಈ ಕಾಮವೆಂಬ ಮೊಸಳೆಯು ಸಂಸಾರಸಾಗರವನ್ನು ದಾಟದಂತೆ ಗಟ್ಟಿಯಾಗಿ ಕಚ್ಚಿ ಹಿಡಿದು ಮತ್ತಷ್ಟು ಸಂಸಾರ ಸಾಗರದಲ್ಲಿಯೇ ಮುಳುಗಿಸುತ್ತದೆ.

**ವ್ರತಾನಿ ವೇದವಿದ್ಯಾಪ್ತಿಕಾರಣಾನ್ಯಖಿಲಾನಿ ಚ ।**
**ನರಕಗ್ರಾಮಮಾರ್ಗೇಣ ಸಂಗೇನಾಪಹೃತಾನಿ ಮೇ ॥** (ವಿಷ್ಣುಪುರಾಣ 1–15–38)

ಭಗವಂತನನ್ನು ತಿಳಿಸುವ ವೇದವಿದ್ಯೆಯನ್ನು ಪಡೆಯಲು ಕಾರಣವಾದ ಬ್ರಹ್ಮಚರ್ಯವೇ ಮೊದಲಾದ ನನ್ನ ಎಲ್ಲ ವ್ರತ–ನಿಯಮಗಳೂ ನರಕದ ದಾರಿಯಾದ ಈ ಸ್ತ್ರೀಸಂಗವೆಂಬ ವಿಷಯ ಸುಖದ ಲಲಾಸೆಯಿಂದ ಅಪಹರಿಸಲ್ಪಟ್ಟಿತು.

ಹೀಗೆ ತನ್ನನ್ನೇ ತಾನು ಜರಿದುಕೊಳ್ಳುತ್ತಾ ಆ ಅಪ್ಸರೆಯನ್ನು ನೋಡಿ 'ಎಲೇ ಪಾಪಿ, ನೀನು ಬಂದ ಕೆಲಸ ಮುಗಿಯಿತಲ್ಲವೆ. ದೇವೇಂದ್ರನ ಆಜ್ಞೆಯಂತೆ ನಿನ್ನ ವಯ್ಯಾರದಿಂದ ನನ್ನ ಬುದ್ಧಿ ಕೆಡಿಸಿ ತಪಸ್ಸನ್ನು ನಾಶಗೊಳಿಸಿದಿಯಲ್ಲವೆ, ಇನ್ನು ಹೊರಡು. ನನಗೆ ನಿನ್ನ ಮೇಲೆ ಬಹಳ ಕೋಪ ಬರುತ್ತಿದ್ದರೂ ನಿನ್ನನ್ನು ಸುಟ್ಟು ಹಾಕಲಾರೆ. ಏಕೆಂದರೆ **'ಸತಾಂ ಸಪ್ತಪದಂ ಮೈತ್ರಮ್'** ಎಂಬಂತೆ ಏಳು ಹೆಜ್ಜೆ ಇಡುವುದರೊಡನೆ ಸಜ್ಜನರಿಗೆ ಮೈತ್ರಿಯುಂಟಾಗುತ್ತದೆ. ನಾನಾದರೋ ನಿನ್ನೊಡನೆ ನೂರಾರು ವರ್ಷ ಬಾಳಿದ್ದೇನೆ. ಅಥವಾ ನಿನ್ನ ಬಗ್ಗೆ ನಾನೇಕೆ ಕೋಪಗೊಳ್ಳಲಿ. ಇಂದ್ರಿಯ ನಿಗ್ರಹವಿಲ್ಲದೆ ಕಾಮವಶನಾಗಿದ್ದುದೇ ನನ್ನ ದೋಷ. ನೀನಾದರೋ ಒಡೆಯನಾದ ಇಂದ್ರನ ಆಜ್ಞೆಯನ್ನು ಪಾಲಿಸಿರುವಿ' ಹೀಗೆ ಸಿಟ್ಟಿನಿಂದ ನುಡಿದನು. ಮುನಿಯ ಸಿಟ್ಟನ್ನು ಕಂಡು ಪ್ರಮ್ಲೋಚೆಯು ಹೆದರಿ ನಡುಗಿದಳು. ಮೈಯೆಲ್ಲ ಬೆವರಿತು. ಮುನಿಯ ಆಜ್ಞೆಯಂತೆ ಕೂಡಲೆ ಆಕಾಶಕ್ಕೆ ಹಾರಿದಳು. ಅಲ್ಲಿ ತನ್ನ ಮೈಯನ್ನು ಕೊಡವಿಕೊಂಡಳು. ಆಗ ದೇಹಕ್ಕೆ ಅಂಟಿಕೊಂಡಿದ್ದ ಬೆವರಿನ ಹನಿಗಳು ಕೆಳಗೆ ಮರಗಳ ಮೇಲೆ ಬಿದ್ದವು. ಆ ಬೆವರಿನ ಹನಿಯೊಡನೆ ಕಂಡು ಮುನಿಯಿಂದಾಗಿ ಧರಿಸಲ್ಪಟ್ಟ ಗರ್ಭವೂ ಬೆರೆತು ಹೊರ ಬಂತು. ಮರಗಳು ಬೆವರಿನೊಡನೆ ಗರ್ಭವನ್ನೂ ಸ್ವೀಕರಿಸದವು. ಆ ಗರ್ಭವನ್ನು ವಾಯುವು ಒಟ್ಟು ಗೂಡಿಸಿದನು. ಚಂದ್ರನು ಬೆಳೆಸಿದನು. ಅವಳೇ ಮಾರಿಷಾ ಎಂಬ ವೃಕ್ಷಕನ್ಯೆ.

ಮುಂದುವರಿಯುತ್ತದೆ.....

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ

ಅರಿಷ್ಟನೇಮಿಯ ಮಗ ಗರುಡ. ಗರುಡನ ಮಗ ಸಂಪಾತಿ. ಸಂಪಾತಿಗೆ ಸುಪಾರ್ಶ್ವನೆಂಬ ಸುತ. ಸುಪಾರ್ಶ್ವನಿಗೆ ಕುಂತಿ, ಈ ಕುಂತಿಯ ಮಕ್ಕಳು ಕಂಕ ಮತ್ತು ಕಂಧರ. ಒಂದು ದಿನ ಕಂಕ ಕೈಲಾಸ ಶಿಖರದಲ್ಲಿ ಸಂಚರಿಸುವ ವೇಳೆ ಅಲ್ಲಿಯ ಶಿಲಾತಲದಲ್ಲಿ ತನ್ನ ಪ್ರೇಯಸಿಯೊಂದಿಗೆ ಕುಳಿತು ವಿನೋದಿಸುವ ವಿದ್ಯುತ್ಪ್ರಭನೆಂಬ ಕುಬೇರ ಭೃತ್ಯನನ್ನು ಕಂಡ. ಕಂಕ ತಾನು ಅದೇ ಶಿಲೆಯಲ್ಲಿ ಕೂತ, ತನ್ನ ಏಕಾಂತಕ್ಕೆ ಭಂಗ ತಂದ ಕಂಕನನ್ನು ಯಕ್ಷ ಈ ರೀತಿ ಆಕ್ಷೇಪಿಸಿದ. "ನೈಷ ಧರ್ಮಃ ಸುಬುದ್ಧೀನಾಂ ಮಿಥೋ ನಿಷ್ಪಾದ್ಯ ವಸ್ತುಷು" ನಿನಗೆ ಇರುವಷ್ಟೆ ಅಧಿಕಾರ ನನಗೂ ಇತರ ಜಂತುಗಳಿಗೂ ಇದೆ. ಇದು ಸಾರ್ವಜನಿಕ ಸ್ಥಳವೆಂದು ಕಂಕ ಮರುಉತ್ತರವಿತ್ತ. ರೊಚ್ಚಿಗೆದ್ದ ಯಕ್ಷ ಕಂಕನನ್ನು ಕೊಂದ. ಅಣ್ಣನ ಮರಣದ ವಾರ್ತೆಯನ್ನು ಕೇಳಿದ ಕಂಧರ ಶೋಕಿಸಿದ. ಪ್ರತೀಕಾರವನ್ನು ಮಾಡಲೋಸುಗ ವಿದ್ಯುತ್ಪ್ರಭನನ್ನು ಕೆಣಕಿದ. ಘೋರ ಯುದ್ಧವಾಯಿತು ಯಕ್ಷನನ್ನು ಕಂಧರ ಕೊಂದು ಹಗೆತನ ತೀರಿಸಿದ. ಮೇನಕನ ಮಗಳು ಯಕ್ಷನ ಪ್ರೇಯಸಿ ಪ್ರಿಯಕರನ ಮರಣದಿಂದ ಹೆದರಿದಳು. ಕಂಧರನಿಗೆ ತನ್ನನ್ನು ಅರ್ಪಿಸಿಕೊಂಡಳು. ಕಾಮರೂಪಿಣಿಯಾದ ಆಕೆ ತಾನೂ ಪಕ್ಷಿಯಾದಳು. ಕಂಧರ ಮತ್ತು ಮೇನಕಾತ್ಮಜೆಯರಲ್ಲಿ ದೂರ್ವಾಸರಿಂದ ಶಪ್ತಳಾದ ವಪು ತಾರ್ಕ್ಷಿಯಾಗಿ ಹುಟ್ಟಿದಳು. ಮದಪಾಲನೆಂಬ ಋಷಿಯ ಮಗ ದ್ರೋಣತಾರ್ಕ್ಷಿಯ ಕೈಹಿಡಿದ. ತಾರ್ಕ್ಷಿ ಈಗ ಬಸುರಿ. ಗರ್ಭಿಣಿಯ ಬಯಕೆ ನರಮಾಂಸದೂಟ. ಅದೇ ವೇಳೆ ಮಹಾಭಾರತದ ಮಹಾಸಂಗ್ರಾಮ ನಡೆಯುತಿತ್ತು. ರಣ ಹದ್ದುಗಳಿಗೆಲ್ಲಾ ರಸದೌತಣ. ಗರ್ಭಿಣಿ ತಾರ್ಕ್ಷಿಯು ಕುರುಕ್ಷೇತ್ರದತ್ತ ಹೊರಟಳು ಮಾಂಸವನ್ನುಣ್ಣುವ ಬಯಕೆಯಿಂದ. ಅಂದು ಅರ್ಜುನ ಭಗದತ್ತನ ಭಯಂಕರ ಯುದ್ಧ ನಡೆಯುತ್ತಿತ್ತು. ಹೆಣಗಳ ರಾಶಿ ರಾಶಿಯೇ ಬಿದ್ದಿತ್ತು. ಹೆಣವನ್ನುಣ್ಣುವ ಬಯಕೆಯೇ ತನ್ನ ಮರಣಕ್ಕೆ ಹಿನ್ನೆಲೆಯೆಂಬುದನ್ನರಿಯದ ತುಂಬು ಗರ್ಭಿಣಿ ತಾರ್ಕ್ಷಿ ತಾನು ಹಾಯಾಗಿ ಗಗನ ಮಾರ್ಗದಲ್ಲಿ ಹಾರುತ್ತಿತ್ತು. ಆಗಲೇ ಅರ್ಜುನನ ಬಿಲ್ಲಿಂದ ಹೊರಟಾ ಬಾಣ ತಾರ್ಕ್ಷಿಯ ಉದರವನ್ನು ಭೇದಿಸಿತು.. ಅವಳ ಹೊಟ್ಟೆಯಲ್ಲಿದ್ದ ತತ್ತಿಗಳು ಆಕಾಶದಿಂದ

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**

ನಕ್ಷತ್ರದೋಪಾದಿಯಲ್ಲಿ ಭೂಮಿಗೆ ಬಿದ್ದವು. ಆ ನಾಲ್ಕು ತತ್ತಿಗಳು ಭೂಮಿಯನ್ನು ಮುಟ್ಟುವುದಕ್ಕೂ ಭಗದತ್ತನ ಆನೆಯ ಕೊರಳ ಗಂಟೆ ಅವುಗಳ ಮೇಲೆ ಕವುಚಿ ಬೀಳುವುದಕ್ಕೂ ಕಾಕತಾಳೀಯವೆಂಬಂತೆ ಸರಿಹೋಯಿತು. ಇತ್ತ ಭಗದತ್ತನ ಆನೆಯೂ ಸತ್ತಿತು. ಭಗದತ್ತನೂ ಅರ್ಜುನನಿಂದ ಹತನಾದ. ಗಂಟೆಯಡಿಯಲ್ಲಿ ಬಿದ್ದ ತತ್ತಿಗಳಿಗೆ ಅಲ್ಲೇ ಕಾವುಕೊಟ್ಟಂತಾಗಿ ಮರಿಗಳಾದವು. ತಾಯಿ ಸತ್ತು ಹೋಯಿತು. ಮಕ್ಕಳನ್ನು ಪಾಲಿಸದೇ ತಾರ್ಕ್ಷಿ ಮತ್ತೆ ವಪುವಾಗಿ ಸ್ವರ್ಗಕ್ಕೆ ಹೋದಳು. ಮಕ್ಕಳು ಪವಾಡ ಸದೃಶವಾಗಿ ಗಂಟೆಯಡಿಯಲ್ಲಿ ಬದುಕಿ ಉಳಿದವು. ಇದು ವಿಧಿ ವಿಲಾಸ. ಯುದ್ಧವೆಲ್ಲಾ ಮುಗಿಯಿತು. ಧರ್ಮರಾಜ ಚಕ್ರವರ್ತಿಯಾದ. ಭೀಷ್ಮರ ಉಪದೇಶವೂ ಮುಗಿದಿದೆ. ಅದೊಂದು ದಿನ ಶಮೀಕಮಹರ್ಷಿಗಳು ಅದೇ ದಾರಿಯಾಗಿ ಹಾದು ಬರುತ್ತಿದ್ದರು. ಹಕ್ಕಿಗಳ ಚಿಕು ಚಿಕು ದನಿ ಕೇಳುತ್ತಿತ್ತು. ಸುತ್ತಲೂ ಗಮನಿಸಿದಾಗ ಗಂಟೆಯ ಒಳಗಿನಿಂದ ಎಂಬುದನ್ನು ಖಾತ್ರಿ ಮಾಡಿಕೊಂಡು ಗಂಟೆಯನ್ನು ಮೇಲೆತ್ತಿದರು ಆರೋಗ್ಯವಂತ ಮರಿಗಳನ್ನು ಕಂಡು ವಿಸ್ಮಿತರಾದರು. ಜೀವಿಗಳ ಉಳಿವು ಅಳಿವನ್ನು ನಿಯಂತ್ರಿಸುವ ಭಗವಂತನ ಕರುಣೆಯನ್ನು ಸ್ಮರಿಸಿದರು. ಅವರ ಅಂತರಂಗದ ಪ್ರೀತಿಯ ಕರೆ ಮರಿಗಳನ್ನು ಆಶ್ರಮವಾಸಿಗಳನ್ನಾಗಿಸಿತು. ಶಮೀಕರ ಆರೈಕೆಯಲ್ಲಿ ಮರಿಗಳು ಬೆಳೆದವು. ಶಮೀಕರು ಮರಿಗಳನ್ನು ತಮ್ಮ ಮಕ್ಕಳಂತೆ ಬೆಳೆಸಿದರು. ತಿಂಗಳು ಕಳೆದಿದೆ. ರೆಕ್ಕೆ ಬಲಿತಿದೆ. ಆಕಾಶಕ್ಕೆ ನೆಗೆದವು. ದೇಶ ಸುತ್ತಿದವು. ಸಂಜೆ ಮರಳಿ ಶಮೀಕರ ಬಳಿಗೆ. ಅದೊಂದು ದಿನ ಶಮೀಕರು ಶಿಷ್ಯರಿಗೆ ಪಾಠ ಹೇಳುತ್ತಿದ್ದಾರೆ, ಈ ಹಕ್ಕಿಗಳು ಗುರುಗಳಿಗೆ ಸುತ್ತು ಹಾಕಿ ಅಭಿವಾದನೆಯನ್ನು ಸಲ್ಲಿಸಿದವು. ಮಾನುಷ ಭಾಷೆಯಲ್ಲಿ ಮಾತಾಡಿದವು. ಶಮೀಕರ ಕರುಣೆಯನ್ನು ಸ್ಮರಿಸಿದವು. ತಂದೆ ತಾಯಿಗಳ ಪ್ರೀತಿಯಿಂದ ವಂಚಿತರಾಗಿ ತಬ್ಬಲಿಗಳಾಗಿದ್ದ ನಮ್ಮನ್ನು ಲಾಲಿಸಿ, ಪಾಲಿಸಿ, ಪೋಷಿಸಿ, ಮೃದುನುಡಿಗಳನ್ನು ಕಲಿಸಿದವರು ತಾವು. ನಮ್ಮ ಪಾಲಿನ ತಂದೆ ತಾಯಿ, ಗುರು, ಬಂಧು, ಬಳಗ ಎಲ್ಲಾ ನೀವೇ ಆಗಿ ಪ್ರೀತಿಯ ಪೂರವನ್ನೇ ಹರಿಸಿದಿರಿ. ನಿಮ್ಮ ಋಣ ಅಪರಿಹಾರ್ಯ. ಇದೇ ಮುಂತಾಗಿ ನಮ್ರರಾಗಿ ನುಡಿಯುವ ಹಕ್ಕಿಗಳನ್ನು ಕಂಡು ಶಮೀಕರಿಗೆ ವಿಸ್ಮಯ ದೇಹ ಪಕ್ಷಿಯದು. ನಡೆ ನುಡಿ ಮನುಜರನ್ನು ನಾಚಿಸುವಂತದು. ಪಕ್ಷಿಗಳಾಗಿ ಜನ್ಮತಳೆದಿರುವ ನಿಮ್ಮ ಹುಟ್ಟಿನ ಗುಟ್ಟನ್ನು ಹೇಳಬೇಕೆಂದರು.

**(ಮುಂದುವರಿಯುವುದು)**

**ಭಾರತೀಯ ಸಂಸ್ಕೃತಿ-ವಿದ್ಯೆಗಳನ್ನು ಕಲಿಯಲು ತೊಡಗಿರಿ.**

ಮುಖಪುಟಲೇಖನ

# ನಮೋ ನಮೋ ಭಕ್ತ ಮುಕ್ತಿದಾಯಿನೇ ಶೇಷಶಾಯಿನೇ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಭಾದ್ರಪದ ಶುಕ್ಲ ಚತುರ್ದಶಿಯು ಅನಂತಪದ್ಮನಾಭವ್ರತವನ್ನು ಆಚರಿಸುವ ದಿನ. ಆದ್ದರಿಂದ ಆ ದಿನಕ್ಕೆ ಅನಂತಚತುರ್ದಶೀ ಎಂದೇ ಹೆಸರು. ಈ ವ್ರತದಲ್ಲಿ ಆರಾಧಿಸಲ್ಪಡುವ ದೇವರು ಅನಂತಪದ್ಮನಾಭ. ಶ್ರೀಮಧ್ವಾಚಾರ್ಯರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಗರುಡ ಪುರಾಣದ ವಾಕ್ಯವನ್ನು ಉದಾಹರಿಸುತ್ತಾ:–

**ಇಮಮಾರಭ್ಯ ಸರ್ವತ್ರ ಯಾವತ್ತು ಕ್ಷೀರಸಾಗರೇ।**

**ಪುರುಷೋऽನಂತಶಯನಃ ಶ್ರೀಮನ್ನಾರಾಯಣಾಭಿಧಃ**

ಈ ಶೇಷಶಾಯಿಯಾದ ಭಗವಂತನ ರೂಪವು ಕ್ಷೀರಸಾಗರದಲ್ಲಿ ಇರುವಂತಹದ್ದು ಎಂದು ತಿಳಿಸಿದ್ದಾರೆ. ಮಹಾಭಾರತತಾತ್ಪರ್ಯನಿರ್ಣಯದಲ್ಲಿ

**ಕದಾಚಿದೀಶಃ ಸಕಲಾವತಾರಾನೇಕಂ ವಿಧಾಯಾಹಿಪತೌ ಹಿ ಶೇತೇ।**

**ಪೃಥಕ್ಚ ಸಂವ್ಯೂಹ್ಯ ಕದಾಚಿದಿಚ್ಛಯಾ ರೇಮೇ ರಮೇಶೋऽಮಿತಸದ್ಗುಣಾರ್ಣವಃ॥**

ಭಗವಂತನು ಮತ್ಸ್ಯಾದಿ ಸಕಲಾವತಾರವನ್ನೂ ಕೂಡ ಪ್ರಳಯಕಾಲದಲ್ಲಿ ಒಂದಾಗಿ ಮಾಡಿ ಶೇಷನ ಮೇಲೆ ಪವಡಿಸುತ್ತಾನೆ. ಪುನಃ ಸೃಷ್ಟಿಕಾಲದಲ್ಲಿ ಎಲ್ಲಾ ರೂಪವನ್ನು ಬೇರೆ ಬೇರೆ ಮಾಡುತ್ತಾನೆ. ಎಂದು ತಿಳಿಸಿದ್ದಾರೆ. ಆದ್ದರಿಂದ ಕ್ಷೀರಸಾಗರದಲ್ಲಿರುವ ಭಗವಂತನ ಈ ಅನಂತಪದ್ಮನಾಭರೂಪವು ಅತ್ಯಂತ ಮಹತ್ವವುಳ್ಳದ್ದಾಗಿದೆ. ಈ ರೂಪವು ಎಲ್ಲ ಅವತಾರಗಳಿಗೆ ಮೂಲ ಸ್ವರೂಪ. ಈ ರೂಪಕ್ಕೆ ಅನಂತಶಯನ ಎಂಬ ಹೆಸರು. ಅನಂತನ ಮೇಲೆ ಮಲಗಿದ ಕಾರಣ ಈ ರೂಪಕ್ಕೆ ಈ ಅಭಿಧೇಯ ಬಂದಿದೆ. ಶೇಷನು ಹಂಸತೂಲಿಕಾತಲ್ಪಕ್ಕಿಂತ ಮೃದುವಾದ ಮೈ ಉಳ್ಳವನು. ಅಂತಹ ಹಾಸಿಗೆಯ ಮೇಲೆ, ಗುಣಗಾನಮಾಡುತ್ತಿರುವ ಲಕ್ಷ್ಮಿಯಿಂದ ಸೇವ್ಯಮಾನವಾಗಿ ಭಗವಂತನು ಪವಡಿಸಿದ್ದಾನೆ. ಅಸಂಖ್ಯಾತ ಹೆಡೆಗಳುಳ್ಳ ಶೇಷನು ಭಗವಂತನ ಗುಣಗಾನದಲ್ಲೇ ತಾತ್ಪರ್ಯವುಳ್ಳ ಅಸಂಖ್ಯಾತ ವೇದಗಳನ್ನು ಪಠಿಸುತ್ತಾ ಭಗವಂತನಿಂದ ಸದಾ ಅನುಗ್ರಹಿಸಲ್ಪಡತಕ್ಕವನಾಗಿದ್ದಾನೆ.

ನಿದ್ರೆಯಲ್ಲಿ ಮೂರು ವಿಧ. ರೋಗ ನಿದ್ರೆ, ಭೋಗ ನಿದ್ರೆ, ಯೋಗ ನಿದ್ರೆ. ರೋಗ ನಿದ್ರೆಯಲ್ಲಿ ಎರಡು ಬಗೆ. ಮಾನಸಿಕರೋಗನಿದ್ರೆ–ದೈಹಿಕರೋಗನಿದ್ರೆ. ಮಾನಸಿಕ ರೋಗ ಎಂದರೆ ಔದಾಸೀನ್ಯ. ಇದರಿಂದ ಬರತಕ್ಕ ನಿದ್ರೆ ರೋಗನಿದ್ರೆ. ದೈಹಿಕರೋಗನಿದ್ರೆ ಎಂದರೆ ಶರೀರಗತ ರೋಗಗಳಿಂದ ಬರತಕ್ಕ ನಿದ್ರೆ. ಆದ್ದರಿಂದ ರೋಗನಿದ್ರೆಯು ಆಧಿವ್ಯಾಧಿಗಳಿಗೆ

ಹಸಿದವರಿಗೆ ಅನ್ನವನ್ನು ನೀಡಿ.

ಸಂಬಂಧಪಟ್ಟದ್ದು. ಭೋಗನಿದ್ರೆ ಎಂದರೆ ಸರಿಯಾಗಿ ತಿಂದು ಚೆನ್ನಾಗಿ ಮಲಗುವುದು ಭೋಗನಿದ್ರೆ. ಈ ಭೋಗನಿದ್ರೆಯೇ ರೋಗನಿದ್ರೆಗೆ ಕಾರಣ. ಈ ಎರಡು ನಿದ್ರೆಗಳೂ ಕೂಡ ಭಗವಂತನಿಗೆ ಇರಲು ಸಾಧ್ಯವಿಲ್ಲ. ಯಾಕೆಂದರೆ ಈ ನಿದ್ರೆಗಳು ಪ್ರಾಕೃತ ಶರೀರವುಳ್ಳವರಿಗೆ ಮಾತ್ರ. ಭಗವಂತನ ಶರೀರವು ಪ್ರಾಕೃತವಲ್ಲ. ಭಗವಂತನು ಸಚ್ಚಿದಾನಂದವೇ ಶರೀರವಾಗಿ ಉಳ್ಳವನು. ಆದ್ದರಿಂದ ಭಗವಂತನ ನಿದ್ರೆಯು ಯೋಗನಿದ್ರೆಯೇ ಹೊರತು ರೋಗನಿದ್ರೆ ಅಥವ ಭೋಗನಿದ್ರೆಗಳಲ್ಲ.

ಹಾವಿನ ಶರೀರಕ್ಕೆ ಭೋಗ ಎಂದು ಹೆಸರು. ಆ ಹಾವಿನ ಶರೀರವು ಅತ್ಯಂತ ಮೃದುವಾಗಿ ಮಲಗಿಕೊಳ್ಳಲು ಆರಾಮವಾಗಿರುತ್ತದೆ ಎಂಬುದು ಎಷ್ಟು ಸತ್ಯವೋ, ತಲೆಯ ಮೇಲೆ ಅಸಂಖ್ಯಾತ ಹೆಡೆಗಳಿಂದ ಘೋರವಾದ ವಿಷವನ್ನು ಸೂಸುತ್ತಿರುತ್ತದೆ ಎಂಬುದು ಕೂಡ ಅಷ್ಟೇ ಸತ್ಯ. ಅಂತಹ ಹಾವಿನ ಮೇಲೆ ಭಗವಂತ ಮಲಗಿದ್ದಾನೆಂದರೆ ಆ ಹಾವಿನ ನಿಯಂತ್ರಣ ಭಗವಂತನ ಕೈಯಲ್ಲಿ ಇದೆ ಎಂದು ತಿಳಿಯುತ್ತದೆ. ಭಗವಂತ ನಿದ್ರೆ ಮಾಡಿದ್ದರೆ ಆ ಹಾವಿನ ನಿಯಂತ್ರಣ ಭಗವಂತನನಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಭಗವಂತನ ನಿದ್ರೆ ಯೋಗ ನಿದ್ರೆ. ಅಂದರೆ ಅವನು ನಿದ್ರೆ ಮಾಡಿದಂತೆ ನಾಟಕ ಮಾಡಿದ್ದಾನೆ ಎಂದೇ ತಿಳಿಯಬೇಕು. ನಿದ್ರೆ ಎಂಬುದು ನಾವು ಸುಖವಾಗಿರುವ ಒಂದು ಅವಸ್ಥೆ. ನಿದ್ರೆಯ ಸಂದರ್ಭದಲ್ಲಿ ನಮಗೆ ಯಾವ ದುಃಖವು ಕೂಡ ಗೋಚರಿಸುವುದಿಲ್ಲ. ಭಗವಂತನು ಸದಾ ಮಲಗುವುದರಿಂದ ತಾನು ಸರ್ವದಾ ಸುಖಿಯಾಗಿರುವನೆಂದು ತಿಳಿಸುತ್ತಾನೆ. ಒಂದು ವೇಳೆ ಭಗವಂತನು ನಿಜವಾಗಿಯೂ ನಿದ್ರಿಸಿದ್ದರೆ ಈ ಜಗತ್ತಿನ ಸೃಷ್ಟಿ-ಸ್ಥಿತಿ-ನಿಯಮನಾದಿಗಳನ್ನು ಮಾಡುವವರು ಯಾರು. ಆದ್ದರಿಂದ ಸೃಷ್ಟ್ಯಾದಿ ಕಾರ್ಯಗಳನ್ನು ನಿರ್ವಹಿಸುವ ಒತ್ತಡವಿದ್ದರೂ ಕೂಡ ಸೃಷ್ಟ್ಯಾದಿಗಳು ತನ್ನ ಸಂಕಲ್ಪ ಮಾತ್ರದಿಂದಲೇ ಸಾಧ್ಯ ಎಂಬುದನ್ನು ತಿಳಿಸಲು ಭಗವಂತ ಸದಾ ಮಲಗಿರುತ್ತಾನೆ.

ಇಂತಹ ಅನಂತಪದ್ಮನಾಭನನ್ನೇ ಅನಂತವ್ರತದಂದು ಆರಾಧಿಸಬೇಕು. ಈ ವ್ರತವನ್ನು ಮಾಡಿದರೆ–

**ಕರಿಷ್ಯತಿ ನರೋಯಸ್ತು ಕುರ್ವನ್ ವ್ರತಮಿದಂ ಶುಭಂ।**
**ಸೋಚಿರಾತ್ ಪಾಪನಿರ್ಮುಕ್ತಃ ಪ್ರಾಪ್ನೋತಿ ಪರಮಾಂ ಗತಿಂ।**

ಎಂಬುದಾಗಿ ಭಗವಂತನೇ ಭವಿಷ್ಯೋತ್ತರ ಪುರಾಣದಲ್ಲಿ ತಿಳಿಸಿರುವಂತೆ ಯಾವ ಮಾನವನು ಪವಿತ್ರವಾದ ಈ ವ್ರತವನ್ನು ಶ್ರದ್ಧಾಭಕ್ತಿಪುರಸ್ಸರವಾಗಿ ಮಾಡುವನೋ ಅವನ ಪಾಪಗಳೆಲ್ಲ ನಾಶವಾಗಿ ಪರಮೋಚ್ಚಗತಿಯನ್ನು ಹೊಂದುತ್ತಾರೆ. ಅಂದರೆ ಮುಕ್ತಿಯನ್ನು ಹೊಂದುತ್ತಾರೆ. ಇದನ್ನೇ ವ್ಯಾಸರಾಜರು ಚಂದ್ರಿಕಾ ಮಂಗಳಾಚರಣೆಯಲ್ಲಿ **"ನಮೋ ನಮೋ ಭಕ್ತ ಮುಕ್ತಿದಾಯಿನೇ**

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

**ಶೇಷಶಾಯಿನೇ"** –ಎಂದು "ಭಕ್ತರಿಗೆ ಮುಕ್ತಿಯನ್ನು ಕರುಣಿಸುವ ಅನಂತಶಯನನಿಗೆ ನಮಸ್ಕಾರ" ಎಂದು ಸ್ತುತಿಸಿದ್ದಾರೆ. ಅನಂತವ್ರತದ ಪರ್ವಕಾಲದಲ್ಲಿಅನಂತಶಯನನಾದ ಅನಂತ ಪದ್ಮನಾಭನನ್ನು ಆರಾಧಿಸಿ ಕೃತಾರ್ಥರಾಗೋಣ.

(33ನೇ ಪುಟದಿಂದ)

ಸರಕೆ ಸರಿ ನರರಲ್ಲ ಅವರಾಡುವದೆ ವೇದಾರ್ಥ"

ಎಂದು ಹೇಳಿ ಮೇಲಿನ ಪ್ರಮೇಯವನ್ನೇ ಸ್ಪಷ್ಟಪಡಿಸಿರುವರು. ಹೀಗೆ ಎಲ್ಲಾ ವರ್ಗಶಬ್ದಗಳಲ್ಲಿ ನಾರಾಯಣನ ನಾಮರೂಪಗಳು ನಿಂತು ಉಪಾಸಕನಿಗೆ ಮೋಕ್ಷ ಸುರಿಸುವುವು ಎಂದ ಮೇಲೆ, ಹರಿಕಥಾಮೃತಸಾರ ಗ್ರಂಥದ ಅಧ್ಯಯನದಿಂದ ದೊರೆಯುವ ಫಲದ ಬಗೆ ಹೇಳುವುದಾದರೂ ಏನಿದೆ. ಹರಿಕಥಾಮೃತಸಾರದ ಪ್ರತಿಶಬ್ದವು ಪರಾತ್ಪರವನ್ನೇ ಪ್ರತಿಪಾದಿಸುತ್ತಾ ನಾರಾಯಣನ ವಿಶ್ವರೂಪವನ್ನೇ ಕಣ್ಣಮುಂದೆ ತಂದು ನಿಲ್ಲಿಸುತ್ತಿರಲು ಕೈವಲ್ಯವು ಎಲ್ಲೋ ಇದೆ ಎಂದು ಹೇಳುವುದಕ್ಕಿಂತ ಹರಿಕಥಾಮೃತಸಾರದಲ್ಲೇ ಇದೆ ಎಂದು ಹೇಳಿದಲ್ಲಿ ತಪ್ಪಾಗಲಾರದು.

(ಮುಂದುವರಿಯುವುದು)

(8ನೇ ಪುಟದಿಂದ)

ಅ–ಇ–ಉ–ಋ ಇದರ ಹೃಸ್ವ, ದೀರ್ಘ, ಪ್ಲುತಗಳು ಒಟ್ಟು 3 x 4 = 12. ಲ್ ಹೃಸ್ವ ಮಾತ್ರ. 12+1=13. ಎ–ಏ–ಐ–ಒ–ಓ–ಔ–ಅಂ–ಅಃ= ಎಂಟು 13+8=21. ಇಪ್ಪತ್ತೈದು ಸ್ಪರ್ಶಗಳು. 25+21=46 ಯ–ರ–ಲ–ವ–ಶ–ಷ–ಸ–ಹ=ಎಂಟು. 8+46=54. ಕ–ಖ–ಗ–ಫ (ಮೂಗಿನಿಂದ ಉಚ್ಚರಿಸಲ್ಪಡುವಂತಾದ್ದು)ನಾಲ್ಕು 54+4=58. ಅನುಸ್ವಾರ, ವಿಸರ್ಗ ಹಾಗೂ ಕ್ಕ, ಶ್ಪ–ನಾಲ್ಕು 58+4=62, ಲ್ ಕಾರದ ದೀರ್ಘ ಹಾಗೂ ಪ್ಲುತ–ಎರಡು 62+2=64. ಳ ಹಾಗೂ ಕ್ಷ ಸೇರಿಸಿದರೆ ಅರವತ್ತಾರು, ಕೊನೆಗೆ ಶಾಸ್ತ್ರೀಯವಾಗಿ ಉಳಿದದ್ದು ಅರವತ್ತಾರು. ಅಲ್ಲದೆ ಆಗಮ ತಂತ್ರ ಶಾಸ್ತ್ರಗಳಲ್ಲಿಯೂ ಇದನ್ನೇ ಹೇಳಿದೆ.

(ಮುಂದುವರಿಯುವುದು)

(15ನೇ...ಪುಟದಿಂದ)

ಅಗ್ನಿ ದೇವನಿಗೆ ನಿನ್ನ ಸಂಪರ್ಕವಾಗಿ ದಗ್ಧವಾದುದೆಲ್ಲ ಶುಚಿಯಾಗಲೆಂಬ ಬ್ರಹ್ಮದೇವರ ಅನುಗ್ರಹವಾಗಿರುವುದನ್ನು ತಿಳಿಯಬೇಕು. ಆದ್ದರಿಂದಲೇ ಕೆಲವು ಅಶುಚಿಯಾದ ವಸ್ತುಗಳಿಗೆ ಅಗ್ನಿ ಸ್ಪರ್ಶದಿಂದ ಶುದ್ಧಿ ಎಂಬ ನಿರೂಪಣೆಯೂ ಧರ್ಮಶಾಸ್ತ್ರದಲ್ಲಿದೆ. ಅದನ್ನೇ ತೇಜಸ್ವಿನಾ ನ ದೋಷಾಯ– ತೇಜಸ್ವಿಗಳಿಗೆ ಯಾವುದೂ ದೋಷವಲ್ಲ–ಎಂದು ಶಾಸ್ತ್ರದಲ್ಲಿ ಹೇಳಿದೆ. ತಿನ್ನಬಾರದ್ದನ್ನು ತಿನ್ನುವ ಚಪಲದ ನಾವು ಅಂತಹ ತೇಜಸ್ವಿಗಳಲ್ಲ– ಅಲ್ಲವೆ?

(ಸಶೇಷ)

ಪ್ರಶ್ನೋತ್ತರ-ಪದಬಂಧ

# ನೆನಪಿನ ಅಂಗಳ

ವಿ॥ ಶಂಕರನಾರಾಯಣಾಚಾರ್ಯ

1) ಹರಿಕಥಾಮೃತಸಾರವನ್ನು ರಚಿಸಿದವರು ಯಾರು?
2) ಹರಿಕಥಾಮೃತಸಾರವನ್ನು ಯಾರ ಕರುಣೆಯಿಂದ ಹೇಳುವೆ ಎಂದರು?
3) ರಾಮಾವತಾರವಾದದ್ದು ಯಾವ ಯುಗದಲ್ಲಿ?
4) 'ದ್ರಾದಿನೀ' ಯಾವುದರ ಹೆಸರು?
5) ಶೃಂಗವೇರಪುರ ಎಲ್ಲಿದೆ?
6) ಶ್ಲೇಷಾತ್ಮಕ ಎಲ್ಲಿದೆ?
7) 'ಕರಿಷ್ಯೇ ವಚನಂ ತವ' ಯಾರ ಮಾತು?
8) ಮಹಾಭಾರತ ಕೋಶ ಯಾರ ಕೃತಿ?
9) 'ಅನುಗೀತೆ'ಯನ್ನು ಕೃಷ್ಣ ಯಾರಿಗೆ ಉಪದೇಶಿಸಿದ?
10) 'ಯಥೇಚ್ಛಸಿ ತಥಾ ಕುರು' ಎಂದವರು ಯಾರು?

**ಕಳೆದ ಸಂಚಿಕೆಯ ಉತ್ತರ:**

1) ಶ್ರೀನಾರಾಯಣಾಯ ನಮಃ 2) ಬ್ರಹ್ಮವಾಯುಗಳು 3) ದೀಪಶಿಖಾ 4) ರಾಜತರಂಗಿಣಿ 5) ನಲಚಂಪು 6) ಶಾರೀಪುತ್ರ ಪ್ರಕರಣ 7) ಚಂದ್ರ 8) ವರ್ಷ, ತಿಂಗಳು, ದಿನಗಳು ಶುಕ್ಲ ಪಕ್ಷ + ಕೃಷ್ಣ ಪಕ್ಷ 9) ವಾಮನ 10) ಅಗ್ನಿ

| | | | | | | |
|---|---|---|---|---|---|---|
| 1 ಮಾ | ನಿ | 3 ನೀ | ■ | 5 ಮೋ | ದ | 6 ಕ |
| ಧ | ■ | ರ | ■ | ಹ | ■ | ಮ |
| 2 ವ | 4 ನ | ಜ | ■ | 7 ಜಾ | ಬಾ | ಲಿ |
| ■ | ವ | ■ | 8 ಕಾ | ಲ | ■ | ನೀ |
| ■ | ಕೂ | ■ | ■ | ■ | 9 ಕ | ■ |
| 10 ಕೋ | ಪ | 13 ನಾ | ■ | 11 ವಿ | ಪಿ | 12 ನ |
| ■ | ■ | ದ | ■ | ■ | ■ | ಗ |

ಪ್ರಾಣಿ ಹಿಂಸೆ ಮಾಡಬೇಡಿ

ರ

ಧ

**ಎಡದಿಂದ ಬಲಕ್ಕೆ:**

1) ಪುಷ್ಪದಂತೆ ಮೊಗವುಳ್ಳವ (5)
4) ಲಕುಮಿ ಹ್ರಸ್ವವಾಗಿ, ಹಿಂತಿರುಗಿದಾಗ (2)
5) ರಗಳೆ ಮಾಡುವ ಪಿಶಾಚಿ (2)
7) ಖಾರವಾದ ಪದಾರ್ಥ (3)
9) ನಮಸ್ಕಾರ, ಸಂಸ್ಕೃತದಲ್ಲಿ (3)
11) ಗಂಡು ಹೊಳೆ (2)
12) ಕೆಟ್ಟ, ಮದುವೆಯಾದ ಗಂಡು (3)
15) ಗಾಯಗೊಂಡ ಸೇವಕ (5)



**ಮೇಲಿಂದ ಕೆಳಕ್ಕೆ**

1) ಎರಡಕ್ಷರದ ದೇವತೆ (2)
2) ಮಳೆಯ ಅಭಿಮಾನೀ ದೇವತೆ (3)
3) ಅಲ್ಲಾಡದ ಪರ್ವತ (2)
4) ಮಧುವನ್ನು ಕೊಂದ ಮಾಧವ (5)
6) ರಾಮ, ರಘುಕುಲಸುತ (5)
7) ಮತ್ತೇ, ಮತ್ತೆ ಅಗಿಯು (3)
8) ಒಳ್ಳೆಯ ಮನುಷ್ಯ (3)
13) ಕಾಡಿನಲ್ಲಿ ಹುಟ್ಟಿದ್ದು (3)
14) ಏನನಾದರೂ ಮಾಡಲು ಸಮರ್ಥ (2)

ಉತ್ತರ ಮುಂದಿನ ಸಂಚಿಕೆಯಲ್ಲಿ

**ನೀಚರನಾಶ್ರಯಿಸಿ ಕೆಡಬೇಡಿ.**